ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಆಲ್‌ರೌಂಡರ್ ರವೀಂದ್ರ ಜಡೇಜ ಮತ್ತು ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವರು ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ಯಲ್ಲಿ ಕ್ರಮವಾಗಿ ರಾಜಸ್ಥಾನ ರಾಯಲ್ಸ್ ಮತ್ತು ಚೆನ್ನೈ ಸೂಪರ್‌ಕಿಂಗ್ಸ್ ತಂಡಗಳನ್ನು ಪ್ರತಿನಿಧಿಸಲಿದ್ದಾರೆ.

16 ನವೆಂಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 246 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ವಿದ್ಯೆ ಮತ್ತು ವಿಕೃತಿ: ಉಗ್ರವಾದದ ಹೊಸ ಮುಖ » 2

ಮೊದಲ ಬಾರಿಗೆ ಮೃತ್ಯುವನ್ನು ಸೋಲಿಸಿದ ಮೃತ್ಯುಂಜಯ » 3

ನಗರಸಭೆ ಮೀಸಲಾತಿ ಪ್ರಕಟ: ಚಟುವಟಿಕೆ ಬಿರುಸು » 4

ಸಚಿವ ಸಂಪುಟ ಪುನಾರಚನೆಗೆ ಗ್ರೀನ್ ಸಿಗ್ನಲ್

ರಾಹುಲ್ ಗಾಂಧಿ ಭೇಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ | ಮಲ್ಲಿಕಾರ್ಜುನ ಖರ್ಗೆ ಜೊತೆ ಚರ್ಚಿಸಲು ಸಲಹೆ

• ಪ್ರಜೋದಯ ವರದಿ

ನವದೆಹಲಿ: ರಾಜ್ಯ ಸಚಿವ ಸಂಪುಟ ಪುನಾರಚನೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹಸಿರು ನಿಶಾನೆ ತೋರಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ ವೇಳೆ, ಸಂಪುಟ ಪುನಾರಚನೆ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚಿಸುವಂತೆ ಸಲಹೆ ನೀಡಿದ್ದಾರೆಂದು ತಿಳಿದುಬಂದಿದೆ.

ಈ ಹಿನ್ನಲೆ ಸಿದ್ದರಾಮಯ್ಯ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗು ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಲಿದ್ದಾರೆ. ರಾಜ್ಯದಲ್ಲಿ 8 ರಿಂದ 12 ಸಚಿವರಿಗೆ ಕೊಕ್ ನೀಡುವ ಸಾಧ್ಯತೆ ಇದೆ. ಯಾರನ್ನು ಸಚಿವ ಸ್ಥಾನದಿಂದ ಕೆಳಗಿಳಿಸುತ್ತಾರೆಂಬುದು ಕುತೂಹಲ ಕೆರಳಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯ ರಾಜಕಾರಣದ ಬಗ್ಗೆ ಚೆನ್ನಾಗಿ ಗೊತ್ತಿರುವುದು ಹಾಗು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಕಾರಣದಿಂದಾಗಿ ಅವರ ಜೊತೆಯಲ್ಲಿ ಚರ್ಚಿಸಿ ಸಂಪುಟದಿಂದ ಯಾರನ್ನು ತೆಗೆಯಬೇಕು, ಯಾರನ್ನು

ಹೊಸದಾಗಿ ಸೇರಿಸಿಕೊಳ್ಳಬೇಕೆಂಬುದರ ಬಗ್ಗೆ ನಿರ್ಧರಿಸುವಂತೆ ಸೂಚಿಸಿದ್ದಾರೆ ಎನ್ನಲಾಗಿದೆ.

10-12 ಸಚಿವರಿಗೆ ಕೊಕ್ ಸಾಧ್ಯತೆ

ಈಗಾಗಲೇ ಸಿದ್ದರಾಮಯ್ಯ ಅವರ ಸಂಪುಟದಲ್ಲಿರುವ 32 ಸಚಿವರಲ್ಲಿ ಕಳಪೆ ಸಾಧನೆ ತೋರಿ ರುವ ಅಥವಾ ನಿರೀಕ್ಷಿತ ಮಟ್ಟದಲ್ಲಿ ಕೆಲಸ ಮಾಡದ 8 ರಿಂದ 12 ಸಚಿವರನ್ನು ಸಂಪುಟದಿಂದ ಕಿತ್ತು ಹಾಕುವಂತೆ ಹೈಕಮಾಂಡ್ ಸೂಚಿಸಿತ್ತು. ಈಗಲೂ ಅದೇ ಲೆಕ್ಕಾಚಾರವನ್ನಿಟ್ಟುಕೊಂಡೇ ಸಂಪುಟ ಪುನಾರಚನೆ ನಡೆಸಲಾಗುತ್ತದೆಂದು ಹೇಳಲಾಗಿದೆ. ಕಳಪೆ ಸಾಧನೆಯ ಸಚಿವರನ್ನು ಕಿತ್ತೊಗೆಯುವುದು ಎಂಬುದಕ್ಕಿಂತ ಇತರರಿಗೆ ಅವಕಾಶ ಕೊಡುವುದೇ ಇದರ ಮೂಲ ಉದ್ದೇಶ. ಸಂಪುಟ ಪುನಾರಾಚನೆಯಾದರೆ ಸಿದ್ದರಾಮಯ್ಯ ಅವರ ಸಂಪುಟ

> **ರಾಹುಲ್ ಗಾಂಧಿ ಅವರ ಭೇಟಿ ವೇಳೆ ಬಿಹಾರದ ಚುನಾವಣಾ ಫಲಿತಾಂಶದ ಬಗ್ಗೆ ಚರ್ಚೆ ನಡೆಸಿದ್ದೇನೆ. ಫಲಿತಾಂಶದಿಂದ ಬೇಸರಗೊಂಡಿದ್ದರು. ಹೀಗಾಗಿ, ನಾವು ನಿಮ್ಮ ಜೊತೆ ಇದ್ದೇವೆ ಎಂದು ರಾಹುಲ್ ಗಾಂಧಿಗೆ ಧೈರ್ಯ ತುಂಬಿ ಬಂದಿದ್ದೇನೆ. ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಲು ಸಮಯ ನಿಗದಿಯಾಗಿದೆ, ಪ್ರಧಾನಿಯನ್ನು ಭೇಟಿಯಾಗುತ್ತೇನೆ.**
> **-ಸಿದ್ದರಾಮಯ್ಯ,** ಮುಖ್ಯಮಂತ್ರಿ

ಸೇರಲು ಸಿದ್ಧರಿರುವವರ ಪಟ್ಟಿ ದೊಡ್ಡದಾಗಿದೆ. ಅವರಲ್ಲಿ ಆದ್ಯತೆಯ ಮೇರೆಗೆ ಅಂದರೆ, ಜಾತಿ ಲೆಕ್ಕಾಚಾರ, ಸಮು ದಾಯಗಳ ಲೆಕ್ಕಾಚಾರ, ಮುಂದಿನ ಚುನಾವಣೆಯಲ್ಲಿ ಪಕ್ಷಕ್ಕೆ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಡುವ ಲೆಕ್ಕಾಚಾರಗಳನ್ನು ಇಟ್ಟುಕೊಂಡು ಸಚಿವರನ್ನಾಗಿ ಸೇರಿಸಿಕೊಳ್ಳಲು ತೀರ್ಮಾನ ಕೈಗೊಳ್ಳಲಾ ಗುತ್ತದೆ.

ನಾಯಕತ್ವ ಬದಲಾವಣೆ ಸದ್ಯಕ್ಕಿಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾವಣೆ ಆಗಿಯೇ ಬಿಡುತ್ತೆ ಎಂದು ತಿಳಿದಿದ್ದ ಅನೇಕರಿಗೆ ಈ ಬಾರಿಯೂ ಭ್ರಮನಿರಸನ ಆಗುವ ಸಾಧ್ಯತೆಗಳು ದಟ್ಟವಾಗಿವೆ. ಸಿದ್ದರಾಮಯ್ಯ ಅವರೇ ಹೋಗಿ ಸಂಪುಟ ಪುನಾರಚನೆಗೆ ಅನುಮತಿ ಪಡೆದು ಬಂದಿರುವುದರಿಂದ ಅವರನ್ನು ಸದ್ಯಕ್ಕೆ ಬದಲಿಸಲು ಹೈಕಮಾಂಡ್ ಕೂಡ ಇಷ್ಟಪಡುವುದಿಲ್ಲ ಎಂದು ಹೇಳಲಾಗಿದೆ. ಈಗಾಗಲೇ ಕೆಲವು ತಪ್ಪುಗಳಿಂದ ಅನೇಕ ಚುನಾವಣೆಗಳನ್ನು ಸೋತಾಗಿದೆ ಕಾಂಗ್ರೆಸ್. ಬಿಹಾರದ ಚುನಾವಣೆಯ ಸೋಲು ಅದಕ್ಕೊಂದು ತಾಜಾ ನಿದರ್ಶನ. ಹಾಗಾಗಿ, ನಾಯಕರನ್ನು ಉಳಿಸಿಕೊಳ್ಳುವುದಕ್ಕೆ ಹೈಕಮಾಂಡ್ ಮುಂದಾಗಲಿದ್ದು ಸದ್ಯಕ್ಕೆ ಮುಖ್ಯಮಂತ್ರಿ ಬದಲಾವಣೆ ಮಾಡುವುದಿಲ್ಲ ಎನ್ನಲಾಗಿದೆ. ರಾಜ್ಯ ರಾಜಕಾರಣದಲ್ಲಿ ನಾಯಕತ್ವ ಬದಲಾವಣೆ ಚರ್ಚೆಯ ಜೊತೆಗೆ, ಸಚಿವ ಸಂಪುಟ ಪುನಾರಚನೆಯ ವಿಚಾರವೂ ಚರ್ಚೆಗೆ ಗ್ರಾಸವಾಗಿದೆ. ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ಬೆಳಗಾವಿ ಅಧಿವೇಶನಕ್ಕೂ ಮೊದಲು ಸಂಪುಟ ಪುನಾರಚನೆ ಆಗಲೇಬೇಕು ಎಂದು ಪಟ್ಟು ಹಿಡಿದಿದ್ದರೆ, ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸದ್ಯಕ್ಕೆ ಅದು ಬೇಡ ಎಂಬವಾದ ಮಂಡಿಸಿದ್ದಾರೆ. ಈ ಇಬ್ಬರೂ ನಾಯಕರ ನಿಲುವಿನ ಹಿಂದೆ ಅವರ ವರದ್ದೇ ಆದ ರಾಜಕೀಯ ಲೆಕ್ಕಾಚಾರಗಳು ಅಡಗಿವೆ. ಅಂತಿಮವಾಗಿ ಹೈಕಮಾಂಡ್ ನಾಯಕರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂಬುದು ಸದ್ಯದ ಕುತೂಹಲದ ಕೇಂದ್ರ ಬಿಂದುವಾಗಿದೆ.

ಸಚಿವ ಸ್ಥಾನದ ಮೇಲೆ ಹಲವರ ಕಣ್ಣು

ಕಾಂಗ್ರೆಸ್‌ನಲ್ಲಿ ಸಚಿವಾಕಾಂಕ್ಷಿಗಳ ಪಟ್ಟಿಯೂ ದೊಡ್ಡದಿದೆ. ಬೇಳೂರು ಗೋಪಾಲಕೃಷ್ಣ, ಬಿ.ಕೆ.ಹರಿಪ್ರಸಾದ್, ಎ.ಹ್ಯಾರಿಸ್, ಸಲೀಂ ಅಹಮದ್, ಆರ್.ವಿ.ದೇಶಪಾಂಡೆ, ನಾಗೇಂದ್ರ, ಬಿ.ಕೆ.ಸಂಗಮೇಶ್, ನರೇಂದ್ರ ಸ್ವಾಮಿ, ಶರತ್ ಬಚ್ಚೇಗೌಡ, ಎಂ.ಕೃಷ್ಣಪ್ಪ, ಮಾಗಡಿ ಬಾಲಕೃಷ್ಣ, ಲಕ್ಷ್ಮಣ್ ಸವದಿ, ಎಸ್.ಪೊನ್ನಣ್ಣ, ರಿಜ್ವಾನ್ ಅರ್ಷದ್, ಕೆ.ಎಂ.ಶಿವಲಿಂಗೇಗೌಡ, ರೂಪಕಲಾ ಶಶಿಧರ್, ಮಾಲೂರು ನಂಜೇಗೌಡ ಸೇರಿ ಹಲವು ನಾಯಕರು ಸಚಿವ ಸಂಪುಟದ ಮೇಲೆ ಕಣ್ಣಿಟ್ಟಿದ್ದಾರೆ.

ಮಣ್ಣಲ್ಲಿ ಮಣ್ಣಾದ ಸಾಲು ಮರದ ತಿಮ್ಮಕ್ಕ

• ಪ್ರಜೋದಯ ವರದಿ

ಬೆಂಗಳೂರು: ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ (114) ಅವರ ಅಂತ್ಯ ಕ್ರಿಯೆ ಇಲ್ಲಿನ ಜ್ಞಾನಭಾರತಿ ಕಲಾ ಗ್ರಾಮದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಶನಿವಾರ ನೆರವೇರಿತು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ನಗರದ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಮೃತ ಪಟ್ಟಿದ್ದರು. ಮೂರು ಸುತ್ತು ಕುಶಾಲ ತೋಪು ಸಿಡಿಸುವ ಮೂಲಕ ಪೊಲೀಸರು ತಿಮ್ಮಕ್ಕ ಅವರಿಗೆ ವಿಶೇಷ ಗೌರವ ಸಲ್ಲಿಸಿದರು.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಾಗು ಅರಣ್ಯ ಸಚಿವ ಈಶ್ವರ್ ಖಂಡ್ರೆ ಸೇರಿ ಹಲವು ಗಣ್ಯರು ವೃಕ್ಷಮಾತೆಗೆ ಅಂತಿಮ ಗೌರವ ಸಲ್ಲಿಸಿದರು. ಅನಕ್ಷರಸ್ಥೆಯಾಗಿದ್ದ ತಿಮ್ಮಕ್ಕ ಅವರು ತಮಗೆ ಮಕ್ಕಳಿಲ್ಲದ ಕಾರಣಕ್ಕೆ ರಸ್ತೆಯ ಬದಿಯಲ್ಲಿ ಆಲದ ಸಸಿಗಳನ್ನು ನೆಟ್ಟು ಅವುಗಳನ್ನೇ ಮಕ್ಕಳಂತೆ ಭಾವಿಸಿ ಬೆಳೆಸಿದ ಅಪ್ರತಿಮ ಪರಿಸರವಾದಿ. ಪರಿಸರ ಸಂರಕ್ಷಣೆಯಲ್ಲಿ ಮಹತ್ತರ ಕಾರ್ಯ ಮಾಡಿದ್ದರ ಹಿನ್ನಲೆ ಹಲ ವಾರು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನ ರಾಗಿದ್ದರು.

ನ್ಯಾಷನಲ್ ಕ್ವಾಲಿಟಿ ಸ್ಟಾಂಡರ್ಡ್ ಅಶುರೆನ್ಸ್ ಪ್ರಮಾಣಪತ್ರ ಗೊರೂರು ಸೇರಿ 5 ಆರೋಗ್ಯ ಕೇಂದ್ರಕ್ಕೆ ರಾಷ್ಟ್ರಮಟ್ಟದ ಗರಿ

• ಪ್ರಜೋದಯ ವರದಿ

ಹಾಸನ: ಗೊರೂರು, ಕಾರ್ಲೆ, ಅಟ್ಟವರ ಹೊಸಳ್ಳಿ, ಹಳೆಕೋಟೆ, ಬಸವಘಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರ ಕಠಿಣವಾದ ಮೌಲ್ಯಮಾಪನ ಎದುರಿಸಿ ರಾಷ್ಟ್ರ ಮಟ್ಟದ ಪ್ರಮಾಣಪತ್ರ ಪಡೆಯುವ ಮೂಲಕ ಗಮನ ಸೆಳೆದಿವೆ.

ನ್ಯಾಷನಲ್ ಕ್ವಾಲಿಟಿ ಸ್ಟಾಂಡರ್ಡ್ ಅಶುರೆನ್ಸ್ ಪ್ರಮಾಣಪತ್ರ ಗಳಿಸಿಕೊಂಡಿರುವ ಈ ಆರೋಗ್ಯ ಕೇಂದ್ರಗಳು, ಗ್ರಾಮೀಣಾ ಭಾಗದ ಜನರಿಗೆ ಗುಣಮಟ್ಟ ವೈದ್ಯಕೀಯ ಸೇವೆ ಒದಗಿಸುವ ಮೂಲಕ ಆರೋಗ್ಯ ಸೇವಾ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿವೆ. ಎನ್.ಕ್ಯೂ.ಎ.ಎಸ್. ಪ್ರಮಾಣಪತ್ರವು ದೇಶದಲ್ಲೇ ಅತ್ಯಂತ ಕಠಿಣವಾದ ಮೌಲ್ಯಮಾಪನ ಪ್ರಕ್ರಿಯೆಗಳಲ್ಲಿ ಒಂದಾಗಿದೆ. ಆರೋಗ್ಯ ಕೇಂದ್ರದ ಸ್ವಚ್ಛತೆ, ಮೂಲ ಸೌಕರ್ಯ, ಚಿಕಿತ್ಸಾ ಗುಣಮಟ್ಟ, ರೋಗಿಗಳಿಗೆ ದೊರೆಯುವ ಸೇವೆಗಳ ನಿರ್ವಹಣೆ, ದಾಖಲೆ ಸಂರಕ್ಷಣೆ ಸೇರಿ ಅನೇಕ ಮಾನದಂಡಗಳ ಮೇಲೆ ಕೇಂದ್ರಗಳನ್ನು ಪರೀಕ್ಷಿಸಲಾಗುತ್ತದೆ. ಆಂಧ್ರಪ್ರದೇಶ ಹಾಗು ತಮಿಳುನಾಡಿನ ತಜ್ಞರು ಒಳಗೊಂಡ ರಾಷ್ಟ್ರಮಟ್ಟದ ಗುಣಾತ್ಮಕ ತಂಡ, ಕಳೆದ ತಿಂಗಳು ಗೊರೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, 48 ಗಂಟೆಗಳ ಕಾಲ ವಿಭಿನ್ನ ಹಂತಗಳಲ್ಲಿ ಪರಿಶೀಲಿಸಿ ಈ ಪ್ರಮಾಣ

> **ಆರೋಗ್ಯ ಕೇಂದ್ರಗಳ ಸ್ವಚ್ಛತೆ, ಗುಣಾತ್ಮಕ ವೈದ್ಯಕೀಯ ಸೇವೆ, ವೈದ್ಯಕೀಯ ಸಿಬ್ಬಂದಿ ಜ್ಞಾನ ಸೇರಿ ಹಲವು ಮಾನದಂಡಗಳ ಆಧಾರದ ಮೇಲೆ ನ್ಯಾಷನಲ್ ಕ್ವಾಲಿಟಿ ಸ್ಟಾಂಡರ್ಡ್ ಅಶುರೆನ್ಸ್ ಪ್ರಮಾಣ ಪತ್ರ ನೀಡಲಾಗುತ್ತದೆ. 500 ರಿಂದ 600 ಪ್ರಶ್ನೆಗಳನ್ನು ಕೇಳಲಾಗುತ್ತದೆ. ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ತಂಡಗಳಿಂದ ಗುಣಮಟ್ಟ ಪರಿಶೀಲನೆ ನಡೆಯುತ್ತದೆ. ನಮ್ಮ ಆರೋಗ್ಯ ಕೇಂದ್ರ ಶೇ.88ರಷ್ಟು ಅಂಕ ಗಳಿಸುವ ಮೂಲಕ ಪ್ರಶಸ್ತಿ ಪಡೆದುಕೊಂಡಿದೆ.**
> **-ಡಾ.ತೇಜಸ್ವಿ,** ವೈದ್ಯಾಧಿಕಾರಿ ಗೊರೂರು ಪ್ರಾಥಮಿಕ ಆರೋಗ್ಯ ಕೇಂದ್ರ

ಪತ್ರಕ್ಕೆ ಶಿಫಾರಸ್ಸು ಮಾಡಿತ್ತು. ಸೂಕ್ಷ್ಮ ಬಹು ಹಂತಗಳ ಪರಿಶೀಲನೆ ಬಳಿಕ ಈ ಗೌರವ ದೊರಕಿದೆ. » ನಾಲ್ಕನೇ ಪುಟದಲ್ಲಿ

ಜಿಲ್ಲೆಯಲ್ಲಿ 7,191 ಆರ್‌ಟಿಐ ಅರ್ಜಿ ವಿಲೇವಾರಿ, 144 ಬಾಕಿ

1,079 ಪ್ರಥಮ, 307 ದ್ವಿತೀಯ ಮೇಲ್ಮನವಿ ಸಲ್ಲಿಕೆ | ರಾಜ್ಯ ಮಾಹಿತಿ ಆಯುಕ್ತ ರುದ್ರಣ್ಣ ಹರ್ತಿಕೋಟೆ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯಲ್ಲಿ ಮಾಹಿತಿ ಹಕ್ಕು ಕಾಯ್ದೆ ಅರ್ಜಿ ವಿಲೇವಾರಿ ಉತ್ತಮವಾಗಿದೆ. ಜನವರಿ ಯಿಂದ ಇಲ್ಲಿಯವರೆ ಒಟ್ಟು 7,335 ಅರ್ಜಿಗಳು ಸಲ್ಲಿಕೆಯಾಗಿದ್ದು, ಅವುಗಳಲ್ಲಿ 7,191 ಅರ್ಜಿ ವಿಲೇವಾರಿ ಮಾಡಲಾಗಿದೆ. 144 ಅರ್ಜಿ ಮಾತ್ರ ಬಾಕಿ ಉಳಿದಿವೆ ಎಂದು ರಾಜ್ಯ ಮಾಹಿತಿ ಆಯುಕ್ತ ರುದ್ರಣ್ಣ ಹರ್ತಿಕೋಟೆ ಅವರು ತಿಳಿಸಿದರು.

ಜಿಲ್ಲಾ ಪಂಚಾಯಿತಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮಾಹಿತಿ ಹಕ್ಕು ಕಾಯ್ದೆ ಕುರಿತು ಕಾರ್ಯಾಗಾರದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 1,079 ಅರ್ಜಿಗಳು ಮಾತ್ರ ಪ್ರಥಮ ಮೇಲ್ಮನವಿಗೆ ಹೋಗಿವೆ. ಅರ್ಜಿ ವಿಲೇವಾರಿಯಲ್ಲಿ ಹಾಸನ ಜಿಲ್ಲೆ ರಾಜ್ಯದಲ್ಲೇ 4ನೇ ಸ್ಥಾನದಲ್ಲಿದೆ ಎಂದು ಹೇಳಿದರು.

ರಾಜ್ಯ ಮಾಹಿತಿ ಆಯೋಗದ

ಎದುರು 307 ದ್ವಿತೀಯ ಮೇಲ್ಮನವಿ ಅರ್ಜಿಗಳು ಬಾಕಿ ಉಳಿದಿವೆ. ಗ್ರಾಮೀಣಾಭಿವೃದ್ಧಿಗೆ ಸಂಬಂಧ ಪಟ್ಟಂತೆ 97 ಅರ್ಜಿಗಳು, 61 ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ್ದು, 57 ಅರ್ಜಿಗಳು ಕಂದಾಯ ಇಲಾಖೆಗೆ ಸಂಬಂಧಿಸಿದ್ದಾಗಿವೆ. 17 ಗೃಹ ಇಲಾಖೆ, 14 ಲೋಕೋಪಯೋಗಿ, 11 ಅರಣ್ಯ ಇಲಾಖೆ, ಶಿಕ್ಷಣ ಇಲಾಖೆಗೆ ಸಂಬಂಧಿಸಿ ಒಟ್ಟು 10 ಅರ್ಜಿಗಳು ನಮ್ಮಲ್ಲಿ ಬಾಕಿ ಉಳಿದಿವೆ ಎಂದು ಮಾಹಿತಿ ನೀಡಿದರು.

ನಾಗರಿಕ ಸಮಾಜದ ಸಬಲೀಕರಣ, ಭ್ರಷ್ಟಾಚಾರ ನಿಯಂತ್ರಣ, ಆಡಳಿತದಲ್ಲಿ ಪಾರದರ್ಶಕತೆ ತರುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕೆಂಬ ಉದ್ದೇಶದಿಂದ ಜಾರಿ ಗೊಳಿಸಿರುವ ಮಾಹಿತಿ ಹಕ್ಕು ಕಾಯ್ದೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಬೇಕೆಂಬ ಉದ್ದೇಶದಿಂದ ರಾಜ್ಯಾದ್ಯಂತ ಕಾರ್ಯಾಗಾರ ನಡೆಸಲಾಗುತ್ತಿದೆ. ಇದುವರೆಗೂ ರಾಜ್ಯದಲ್ಲಿ 14 ಜಿಲ್ಲೆಗಳಲ್ಲಿ ಕಾರ್ಯಾಗಾರ ನಡೆಸಿ ಅಧಿಕಾರಿಗಳನ್ನು ಉತ್ತೇಜಿಸಲಾಗುತ್ತಿದೆಂದು ತಿಳಿಸಿದರು.

ಮಾಹಿತಿ ಹಕ್ಕುದಾರರಿಗೆ ಅಧಿಕಾರಿಗಳು ಸರಿಯಾದ ಮಾಹಿತಿ ನೀಡದಿದ್ದರೆ 25 ಸಾವಿರ ರೂ. ವರೆಗೆ ದಂಡ ವಿಧಿಸುವ ಮತ್ತು ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡುವ, ಅರ್ಜಿದಾರರಿಗೆ ಪರಿಹಾರ ಕೊಡಿಸುವ ಅಧಿಕಾರ ಆಯೋಗಕ್ಕೆ ಇದೆ. ಮಾಹಿತಿ ಹಕ್ಕು ಕಾಯ್ದೆ ಜಾರಿಯಾಗಿ 20 ವರ್ಷ ಪೂರೈಸಿದೆ. ಆ ಅವಧಿಯಲ್ಲಿ ರಾಜ್ಯ ದಲ್ಲಿ ಒಟ್ಟು 1,719 ಅಧಿಕಾರಿಗಳಿಗೆ 10.13 ಕೋಟಿ ರೂ. ದಂಡ ವಿಧಿಸ ಲಾಗಿದೆ. ಅದರಲ್ಲಿ 3,084 ಅಧಿಕಾರಿ ಗಳಿಂದ 2.70 ಕೋಟಿ ರೂ. ದಂಡ ಮಾತ್ರ ವಸೂಲಿ ಮಾಡಲಾಗಿದೆ. ಅಧಿ ಕಾರಿಗಳು ದಂಡ ಪಾವತಿ ಮಾಡಿದ್ದರೆ ನಿವೃತ್ತಿ ಸಂದರ್ಭದಲ್ಲಿ ಅವರಿಗೆ ತೊಂದರೆಯಾಗಲಿದೆ ಎಂದು ಹೇಳಿದರು. » ನಾಲ್ಕನೇ ಪುಟದಲ್ಲಿ

> **ಕಳೆದ 20 ವರ್ಷದ ಅವಧಿಯಲ್ಲಿ ಹಾಸನ ಜಿಲ್ಲೆಗೆ ಸಂಬಂಧಪಟ್ಟಂತೆ 217 ಅಧಿಕಾರಿಗಳಿಗೆ 18 ಲಕ್ಷ ರೂ. ದಂಡ ವಿಧಿಸಲಾಗಿದೆ. ಅದರಲ್ಲಿ 45 ಅಧಿಕಾರಿಗಳಿಂದ 4.4 ಲಕ್ಷ ರೂ. ವಸೂಲಾಗಿದೆ. ಬಾಕಿ ವಸೂಲಿಗೆ ಆಯೋಗದಿಂದ ಜಿಲ್ಲಾಡಳಿತಕ್ಕೆ ಪತ್ರ ಬರೆಯಲಾಗುವುದು.**
> **-ರುದ್ರಣ್ಣ ಹರ್ತಿಕೋಟೆ,** ರಾಜ್ಯ ಮಾಹಿತಿ ಆಯುಕ್ತ

> **ಮಾಹಿತಿ ಹಕ್ಕು ಕಾಯ್ದೆ ದುರ್ಬಳಕೆ ತಡೆಯಲು ಅಧಿಕಾರಿಗಳು ಸರಿಯಾದ ಮಾಹಿತಿ ನೀಡಬೇಕು, ಇಲ್ಲದಿದ್ದರೆ ಬ್ಲ್ಯಾಕ್ ಮೇಲರ್‌ಗಳು ಸೃಷ್ಟಿಯಾಗುತ್ತಾರೆ. ಬ್ಲ್ಯಾಕ್‌ಮೇಲರ್‌ಗಳು ಸೃಷ್ಟಿಗೆ ಅಧಿಕಾರಿಗಳು ಅವಕಾಶ ನೀಡದೆ, ಅರ್ಜಿದಾರರಿಗೆ ನಿರ್ದಿಷ್ಟ ಸಮಯದಲ್ಲಿ ಮಾಹಿತಿ ಒದಗಿಸಬೇಕು.**
> **-ಎಸ್.ರಾಜಶೇಖರ್,** ರಾಜ್ಯ ಮಾಹಿತಿ ಆಯುಕ್ತ

ಚಿನ್ನಾಭರಣ ಕಳವು

• ಪ್ರಜೋದಯ ವರದಿ

ಸಕಲೇಶಪುರ: ಮನೆಯ ಬಾಗಿಲ ಬೀಗ ಮುರಿದು ಒಳನುಗ್ಗಿದ ಕಳ್ಳರು ಬೀರುವಿನಲ್ಲಿಟ್ಟಿದ್ದ 11 ಗ್ರಾಂ. ಚಿನ್ನಾಭರಣ, ನಗದು ಕಳವು ಮಾಡಿರುವ ಘಟನೆ ತಾಲ್ಲೂಕಿನ ವಡೂರು ಗ್ರಾಮದಲ್ಲಿ ನಡೆದಿದೆ.

ಶಾಲಾ ವಾಹನ ಚಾಲಕನಾಗಿರುವ ಗ್ರಾಮದ ರಂಜನ್ ಎಂಬುವವರು ಮನೆಯ ಬಾಗಿಲಿಗೆ ಬೀಗ ಹಾಕಿಕೊಂಡು ಕೆಲಸಕ್ಕೆ ಹೋಗಿದ್ದರು. ಪತ್ನಿ ತೋಟದ ಕೆಲಸಕ್ಕೆ ಹೋಗಿದ್ದರೆ, ಮಕ್ಕಳು ಶಾಲೆಗೆ ಹೋಗಿದ್ದರು. ಈ ವೇಳೆ ಮನೆ ಬೀರುವಿನಲ್ಲಿದ್ದ 8 ಗ್ರಾಂ. ತೂಕದ ಚಿನ್ನದ ಓಲೆ, 2ಗ್ರಾಂ. ಚಿನ್ನದ ಗುಂಡು, 1ಗ್ರಾಂ ಚಿಕ್ಕ ಉಂಗುರ, ಬೆಳ್ಳಿಯ ಕಾಲುಚೈನು ಹಾಗು 5000 ಸಾವಿರ ನಗದು ಹಣ ಸೇರಿ ಒಟ್ಟು 11 ಗ್ರಾಂ. ತೂಕದ ಚಿನ್ನಾಭರಣ ಕಳವು ಮಾಡಲಾಗಿದೆ.

ಕೇಂದ

ವಿದ್ಯೆ ಮತ್ತು ವಿಕೃತಿ: ಉಗ್ರವಾದದ ಹೊಸ ಮುಖ

> ವೈವಿಧ್ಯವು ನಮ್ಮ ಬಲವಾದರೂ, ದುರದೃಷ್ಟವಶಾತ್, ಕೆಲ ಶಕ್ತಿಗಳಿಗೆ ಅದು ದೌರ್ಬಲ್ಯದ ಅಂಶವಾಗಿದೆ. ಹಲವು ಪಾಶ್ಚಿಮಾತ್ಯ ಮತ್ತು ಪುಟ್ಟ ರಾಷ್ಟ್ರಗಳು ಎದುರಿಸುವ ಸಮಸ್ಯೆಗಳಿಗಿಂತ ಭಾರತೀಯರ ಸವಾಲುಗಳು ತೀರಾ ಭಿನ್ನವಾಗಿವೆ. ಬೇರೆ ದೇಶಗಳು ಕೇವಲ ಆರ್ಥಿಕ ಅಥವಾ ಭೌಗೋಳಿಕ ಸವಾಲುಗಳನ್ನು ಎದುರಿಸಿದರೆ, ನಾವು ಮೂಲಭೂತ ವಾದದ ಸವಾಲನ್ನು ಎದುರಿಸುತ್ತಿದ್ದೇವೆ.

ನಾವು ಎದುರಿಸುತ್ತಿರುವ ಸನ್ನಿವೇಶವು ಅತ್ಯಂತ ಅಪಾಯಕಾರಿಯಾಗಿದೆ. ಇದನ್ನು ಕೇವಲ ರಾಜಕೀಯ ಅಥವಾ ಸಾಮಾಜಿಕ ಬಿಕ್ಕಟ್ಟು ಎಂದು ಪರಿಗಣಿಸಲು ಸಾಧ್ಯವಿಲ್ಲ. ಇದು ನಮ್ಮ ರಾಷ್ಟ್ರೀಯ ಅಸ್ತಿತ್ವದ ಪ್ರಶ್ನೆಯಾಗಿದೆ. ಬಾಹ್ಯವಾಗಿ, ಗಡಿಯಲ್ಲಿ ನಿಂತಿರುವ ಶತ್ರುವನ್ನು ಗುರುತಿಸುವುದು ಸುಲಭ. ಅವರನ್ನು ನೇರವಾಗಿ ಹೊಡೆದುರುಳಿಸಿ ನಮ್ಮ ಗಡಿಯನ್ನು ರಕ್ಷಿಸಿಕೊಳ್ಳಬಹುದು. ಆದರೆ, ನಮಗೆ ಈಗ ಎದುರಾಗಿರುವ ಸವಾಲು ಸಂಪೂರ್ಣವಾಗಿ ವಿಭಿನ್ನವಾಗಿದೆ.

ನಮ್ಮೊಂದಿಗೆ ಬದುಕುತ್ತಿರುವ, ನಮ್ಮಂತೆಯೇ ಕಾಣುತ್ತಿರುವ, ಕೆಲವೊಮ್ಮೆ ನಮ್ಮದೇ ಭಾಗವಾಗಿರುವ ಆಂತರಿಕ ಶತ್ರುಗಳನ್ನು ಹುಡುಕಿ ಗುರುತಿಸುವುದು ನಿಜಕ್ಕೂ ಕಷ್ಟದ ಕೆಲಸ. ಈ ಆಂತರಿಕ ಶತ್ರುಗಳು ಗೂಢಚಾರರು ಅಥವಾ ಸಣ್ಣ ಬಂಡುಕೋರರಲ್ಲ. ಅವರು ಒಂದು ವ್ಯವಸ್ಥೆ.

ಇದು ಮೂಲಭೂತವಾದ, ಸೈದ್ಧಾಂತಿಕ ವಿಷ ಮತ್ತು ವಿಭಜನಕಾರಿ ಮನಸ್ಸುಗಳ ರೂಪದಲ್ಲಿ ನಮ್ಮ ಸಮಾಜದೊಳಗೆ ಪ್ರವೇಶಿಸಿದೆ. ಭಾರತವು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಮಾತ್ರವಲ್ಲ, 140 ಕೋಟಿಗೂ ಹೆಚ್ಚು ಜನರನ್ನು ಹೊಂದಿರುವ ಒಂದು ವಿಶಿಷ್ಟ ನಾಗರಿಕತೆ.

ವೈವಿಧ್ಯವು ನಮ್ಮ ಬಲವಾದರೂ, ದುರದೃಷ್ಟವಶಾತ್, ಕೆಲ ಶಕ್ತಿಗಳಿಗೆ ಅದು ದೌರ್ಬಲ್ಯದ ಅಂಶವಾಗಿದೆ. ಹಲವು ಪಾಶ್ಚಿಮಾತ್ಯ ಮತ್ತು ಪುಟ್ಟ ರಾಷ್ಟ್ರಗಳು ಎದುರಿಸುವ ಸಮಸ್ಯೆಗಳಿಗಿಂತ ಭಾರತೀಯರ ಸವಾಲುಗಳು ತೀರಾ ಭಿನ್ನವಾಗಿವೆ. ಬೇರೆ ದೇಶಗಳು ಕೇವಲ ಆರ್ಥಿಕ ಅಥವಾ ಭೌಗೋಳಿಕ ಸವಾಲುಗಳನ್ನು ಎದುರಿಸಿದರೆ, ನಾವು ಮೂಲಭೂತವಾದದ ಸವಾಲನ್ನು ಎದುರಿಸುತ್ತಿದ್ದೇವೆ. ಈ ಮೂಲಭೂತವಾದವು ದೇಶದ ಪ್ರಗತಿಯನ್ನು ಸಹಿಸದೆ, ನಿರಂತರವಾಗಿ ರಾಷ್ಟ್ರದ ಹಿತಾಸಕ್ತಿಗಳ ವಿರುದ್ಧ ಕಾರ್ಯನಿರ್ವಹಿಸುತ್ತಿದೆ.

ಈ ಆಂತರಿಕ ಶತ್ರುಗಳು ಬಹುತೇಕ ಎಲ್ಲ ಕ್ಷೇತ್ರಗಳಲ್ಲೂ ಕಾರ್ಯನಿರ್ವಹಿಸುತ್ತಿದ್ದಾರೆ, ನಮ್ಮ ಶಿಕ್ಷಣ, ಮಾಧ್ಯಮ, ರಾಜಕೀಯ ಮತ್ತು ಸಾಮಾಜಿಕ ರಚನೆಗಳೊಳಗೆ ಬೇರೂರಿದ್ದಾರೆ. ಇವರ ಮುಖ್ಯ ಗುರಿ ದೇಶವನ್ನು ಆರ್ಥಿಕವಾಗಿ ಅಥವಾ ಮಿಲಿಟರಿಯಾಗಿ ದುರ್ಬಲ ಗೊಳಿಸುವುದಲ್ಲ; ಬದಲಿಗೆ ಮಾನಸಿಕ ಮತ್ತು ಭಾವನಾತ್ಮಕ ವಿಭಜನೆ.

ಜನರು ಪರಸ್ಪರ ನಂಬಿಕೆ ಕಳೆದುಕೊಳ್ಳುವಂತೆ ಮಾಡಿ, ನಿರಂತರ ಕಲಹದ ಸ್ಥಿತಿಯನ್ನೇ ಸೃಷ್ಟಿಸುವುದು ಇವರ ಕಾರ್ಯತಂತ್ರ. ಈ ದೇಶದ 140 ಕೋಟಿ ಜನರಿಗೂ ಬೇಕಾಗಿರುವುದು ಪ್ರಗತಿ, ಸುರಕ್ಷತೆ ಮತ್ತು ಉತ್ತಮ ಜೀವನ. ಆದರೆ, ಕೆಲವರು ಈ ಸಾಮೂಹಿಕ ಆಕಾಂಕ್ಷೆಯನ್ನು ಕಡೆಗಣಿಸಿ, ದ್ವೇಷದ ರಾಜಕಾರಣವನ್ನು ಮುಂದುವರಿಸುತ್ತಿದ್ದಾರೆ.

ಕೊಲ್ಲುವಿಕೆ ಮತ್ತು ನಾಶಮಾಡುವಿಕೆಯಲ್ಲಿ ಬೆಳವಣಿಗೆ ಇಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಲು ಅವರು ಸಿದ್ಧರಿಲ್ಲ. ಒಂದು ಪ್ರಗತಿಪರ ಸಮಾಜದಲ್ಲಿ, ಒಬ್ಬ ಮನುಷ್ಯ ಇನ್ನೊಬ್ಬನನ್ನು ದ್ವೇಷಿಸುವ ಅಥವಾ ಕೊಲ್ಲುವ ಮೂಲಕ ಏನನ್ನೂ ಸಾಧಿಸಲಾಗದು.

ಇದರ ಅಂತಿಮ ಫಲಿತಾಂಶವೆಂದರೆ ಹಿನ್ನಡೆ, ಸಾಮಾಜಿಕ ಅಸ್ಥಿರತೆ ಮತ್ತು ಅಂತಾ ರಾಷ್ಟ್ರೀಯ ಮಟ್ಟದಲ್ಲಿ ಅಪಹಾಸ್ಯ. ಶಿಕ್ಷಿತ ಮುಸ್ಲಿಮರು, ಅನಕ್ಷರಸ್ಥ ಮುಸ್ಲಿಮರಿಗಿಂತ ಅಪಾಯಕಾರಿ. ಈ ಮಾತು ಕೇಳಲು ಅಸಹಜ ಅನಿಸಬಹುದು,



ವ'ಾತ'ನ'ನ್ನು ಹೇಳಿದ್ದರು. ಆಗ ನನಗೆ ಅದು ಅರ್ಥವಾಗಿರಲಿಲ್ಲ, ಅದೊಂದು ಅತಿಶಯೋಕ್ತಿ ಎಂದು ಭಾವಿಸಿದ್ದೆ.

ಶಿಕ್ಷಣವು ಜ್ಞಾನ, ವಿವೇಚನೆ ಮತ್ತು ಸಹಿಷ್ಣುತೆಯನ್ನು ತರುತ್ತದೆ ಎಂಬುದು ನನ್ನ ಬಲವಾದ ನಂಬಿಕೆ. ಓದಿದವರು ಎಂದಿಗೂ ಹಿಂಸಾಚಾರ ಮತ್ತು ಮೂಲಭೂತವಾದದ ಮಾರ್ಗವನ್ನು ಆಯ್ದುಕೊಳ್ಳಲು ಸಾಧ್ಯವಿಲ್ಲ ಎಂದು ನಾನು ಅಂದುಕೊಂಡಿದ್ದೆ ಅಂದಿನ ದಿನಗಳಲ್ಲಿ; ಹೀಗಾಗಿ ಆ ಮಾತಿನ ಗಂಭೀರತೆ ನನಗರ್ಥವಾಗಿರಲಿಲ್ಲ.

ಶಿಕ್ಷಣವು ಸಮಾಜವನ್ನು ಸುಧಾರಿಸುವ ಸಾಧನ. ಕಲಿಯುವುದರಿಂದ ಅಪಾಯ ಹೇಗೆ ಹೆಚ್ಚಾಗುತ್ತದೆ? ಎಂಬುದು ನನ್ನ ಎಣಿಕೆಯಾಗಿತ್ತು. ಆದರೆ ಇತ್ತೀಚಿನ ಘಟನೆಗಳನ್ನು, ದೆಹಲಿಯಂಥ ಪ್ರಮುಖ ನಗರಗಳಲ್ಲಿ ನಡೆದ ಭಯೋತ್ಪಾದಕ ಕೃತ್ಯಗಳ ಕುರಿತಾದ ತನಿಖೆಗಳನ್ನು ಗಮನಿಸಿದಾಗ, ಆ ಹಿರಿಯ ಅಧಿಕಾರಿಯ ಮಾತಿನಲ್ಲಿದ್ದ ಕಠೋರ ಸತ್ಯವು ಅರಿವಾಗತೊಡಗಿದೆ.

ದೆಹಲಿಯಲ್ಲಿನ ಸ್ಫೋಟಗಳು ದೇಶಾದ್ಯಂತ ಆತಂಕವನ್ನು ಸೃಷ್ಟಿಸಿವೆ. ಕಡಿಮೆ ತೀವ್ರತೆಯ ಸ್ಫೋಟಗಳಾದರೂ, ಅವುಗಳ ಹಿಂದಿನ ಉದ್ದೇಶ ಮತ್ತು ಆಯೋಜನೆಯ ಜಟಿಲತೆ ಆಘಾತಕಾರಿ. ಈ ಕೃತ್ಯದ ಆರೋಪಿಗಳನ್ನು ಬಂಧಿಸಿದಾಗ ಹೊರಬಿದ್ದ ಸತ್ಯಗಳು ದೇಶವನ್ನು ದಂಗುಬಡಿಸಿವೆ. ಈ ಕೃತ್ಯದ ಹಿಂದೆ ಕೆಲವು ವಿದ್ಯಾವಂತ ಮತ್ತು ಉತ್ತಮ ಹಿನ್ನೆಲೆಯ ಯುವಕ-ಯುವತಿಯರ ಕೈವಾಡವಿರುವುದು ತನಿಖೆಗಳಿಂದ ಸ್ಪಷ್ಟವಾಗಿದೆ.

ಎಂಜಿನಿಯರಿಂಗ್ ಪದವೀಧರರು, ವೈದ್ಯಕೀಯ ವಿದ್ಯಾರ್ಥಿಗಳು, ಉನ್ನತ ಶಿಕ್ಷಣ ಪಡೆದವರು ಮತ್ತು ವಿವಿಧ ವಲಯಗಳಲ್ಲಿ ಕೆಲಸ ಮಾಡುತ್ತಿದ್ದ ವೃತ್ತಿಪರರೂ ಇಂಥ ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ. ಇದು ಭಯೋತ್ಪಾದಕರ ಕುರಿತ ನಮ್ಮ ಸಾಂಪ್ರದಾಯಿಕ ಕಲ್ಪನೆಗಳನ್ನು ಮರುಪರಿಶೀಲಿಸುವಂತೆ ಮಾಡುತ್ತದೆ.

ಹಿಂದಿನ ದಿನಗಳಲ್ಲಿನ ಭಯೋತ್ಪಾದಕ ಚಟುವಟಿಕೆಗಳು ಕೇವಲ ದೈಹಿಕ ಬಲವನ್ನು ಮತ್ತು ಕಚ್ಚಾ ಬಾಂಬ್‌ಗಳನ್ನು ಅವಲಂಬಿಸಿದ್ದವು. ಅವುಗಳ ಹಿಂದೆ ಸಿದ್ಧಾಂತ ಇರುತ್ತಿದ್ದರೂ, ಕಾರ್ಯಾಚರಣೆಯ ಸಂಕೀರ್ಣತೆ ಕಡಿಮೆ ಇರುತ್ತಿತ್ತು. ಆದರೆ, ಇಂದಿನ ಭಯೋತ್ಪಾದಕ ಜಾಲಗಳು ರಾಷ್ಟ್ರೀಯ ಭದ್ರತೆಗೆ ಕಂಡರಿಯದ ಸವಾಲುಗಳನ್ನು ಒಡ್ಡುತ್ತಿವೆ.

ದೆಹಲಿ, ಮುಂಬೈ, ಬೆಂಗಳೂರಿನಂಥ ಮಹಾನಗರಗಳಲ್ಲಿ ನಡೆಯುವ ಸ್ಫೋಟಗಳು ಮತ್ತು ದಾಳಿಗಳು ಕೇವಲ ಗೊಂದಲ ಸೃಷ್ಟಿಸಲು ನಡೆಸುವ ಕೃತ್ಯಗಳಲ್ಲ; ಅವು ಅತ್ಯಂತ ನಿಖರವಾದ ಯೋಜನೆ, ಅತ್ಯಾಧುನಿಕ ತಂತ್ರಜ್ಞಾನದ ಬಳಕೆ ಮತ್ತು ವ್ಯವಸ್ಥಿತ ಆರ್ಥಿಕ ಬೆಂಬಲವನ್ನು ಹೊಂದಿರುತ್ತವೆ. ಭಯೋತ್ಪಾದನೆಯ ಸ್ವರೂಪ ಬದಲಾಗಿದೆ. ಅನಕ್ಷರಸ್ಥರು, ಬಡವರು, ಅವಕಾಶವಂಚಿತರು ಉಗ್ರವಾದದ ಬಲೆಗೆ ಸುಲಭವಾಗಿ ಬೀಳುತ್ತಾರೆ ಎಂದು ಸಾಮಾನ್ಯವಾಗಿ ನಾವು ನಂಬುತ್ತೇವೆ, ಶಿಕ್ಷಣದ ಕೊರತೆಯು ಅವರನ್ನು ತಪ್ಪು ಮಾರ್ಗಕ್ಕೆ ತಳ್ಳುತ್ತದೆ ಎಂದು ಭಾವಿಸುತ್ತೇವೆ.

ಆದರೆ, ಭಯೋತ್ಪಾದನೆಯ ಇತ್ತೀಚಿನ ಸ್ವರೂಪವನ್ನು ಗಮನಿಸಿದರೆ, ಈ ಕಲ್ಪನೆ ಸಂಪೂರ್ಣವಾಗಿ ತಪ್ಪೆಂದು ಅರಿವಾಗುತ್ತದೆ. ಉಗ್ರ ಸಂಘಟನೆಗಳು ಬಡವರು ಅಥವಾ ಅನಕ್ಷರಸ್ಥರನ್ನು ಮಾತ್ರವಲ್ಲದೆ, ಉತ್ತಮ ಶಿಕ್ಷಣ ಪಡೆದ, ಸಮಾಜದಲ್ಲಿ ಗೌರವಾನ್ವಿತ ಸ್ಥಾನಮಾನ ಹೊಂದಿರುವ ವ್ಯಕ್ತಿಗಳನ್ನೂ ತಮ್ಮ ಜಾಲಕ್ಕೆ ಸೆಳೆದುಕೊಳ್ಳುತ್ತಿವೆ.

ಆಘಾತಕಾರಿ ಸತ್ಯವಾದರೂ ಇದನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿದೆ. ಇತ್ತೀಚೆಗೆ ಭಯೋತ್ಪಾದನಾ ಜಾಲಗಳಲ್ಲಿ ಸಿಕ್ಕಿಬಿದ್ದವರ ಹಿನ್ನೆಲೆಯನ್ನು ಅವಲೋಕಿಸಿದರೆ, ಅವರಲ್ಲಿ ಅನೇಕರು ಉನ್ನತ ಶಿಕ್ಷಣ (ವೈದ್ಯಕೀಯ, ಎಂಜಿನಿಯರಿಂಗ್), ಮಾಹಿತಿ ತಂತ್ರಜ್ಞಾನದ ಅರಿವು ಮತ್ತು ಬಲವಾದ ಸಂವಹನ ಕೌಶಲಗಳನ್ನು ಹೊಂದಿರುವುದು ಅರಿವಾಗುತ್ತದೆ.

ಶಿಕ್ಷಿತ ವ್ಯಕ್ತಿಗಳು ತಮ್ಮ ಬುದ್ಧಿವಂತಿಕೆ, ವಿಶ್ಲೇಷಣಾತ್ಮಕ ಕೌಶಲ ಮತ್ತು ತಾಂತ್ರಿಕ ಜ್ಞಾನವನ್ನು ಉಗ್ರ ಕೃತ್ಯಗಳಿಗೆ ಬಳಸಿದಾಗ, ಅದು ಹೆಚ್ಚು ಭೀಕರ ಪರಿಣಾಮಗಳನ್ನು ಉಂಟು ಮಾಡುತ್ತದೆ. ಅವರಿಗೆ ಯೋಜನೆಗಳನ್ನು ರೂಪಿಸುವ, ಸಂಕೀರ್ಣ ಕಾರ್ಯತಂತ್ರಗಳನ್ನು ಹೆಣೆಯುವ ಮತ್ತು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಬಳಸಿ ತಮ್ಮ ಉದ್ದೇಶಗಳನ್ನು ಸಾಧಿಸುವ ಸಾಮರ್ಥ್ಯವಿರುತ್ತದೆ.

ಅಂತರ್ಜಾಲ, ಎನ್‌ಕ್ರಿಪ್ಟ್ ಮಾಡಿದ ಸಂದೇಶಗಳು, ಹಣಕಾಸು ವ್ಯವಹಾರಗಳು, ಲಾಜಿಸ್ಟಿಕ್ಸ್ ಮತ್ತು ಗುಪ್ತಚರ ಸಂಗ್ರಹಣೆ- ಇವೆಲ್ಲವೂ ಉನ್ನತ ಮಟ್ಟದ ಶಿಕ್ಷಣ ಮತ್ತು ಕೌಶಲವನ್ನು ಬೇಡುತ್ತವೆ. ಎಂಜಿನಿಯರ್‌ಗಳು, ವೈದ್ಯರು, ಐಟಿ ತಜ್ಞರು, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಇವರು ಸಾಮಾನ್ಯ ಜನರಲ್ಲಿ ಸುಲಭವಾಗಿ ಬೆರೆತು ಹೋಗುತ್ತಾರೆ, ಯಾರೂ ಅನುಮಾನಿಸದಂತೆ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಇವರು ಅತ್ಯಂತ ಬುದ್ಧಿವಂತಿಕೆಯಿಂದ ತಮ್ಮ ಗುರುತನ್ನು ಮರೆಮಾಚುತ್ತಾರೆ, ಕಾನೂನು ಸಂಸ್ಥೆಗಳ ಕಣ್ತಪ್ಪಿಸಿ ಕಾರ್ಯನಿರ್ವಹಿಸುತ್ತಾರೆ. ಅನಕ್ಷರಸ್ಥ ಅಥವಾ ಕಡಿಮೆ ವಿದ್ಯಾವಂತ ಉಗ್ರಗಾಮಿಗಳಿಗೆ ಇಂಥ ಸಂಕೀರ್ಣ ಜಾಲಗಳನ್ನು ನಿರ್ಮಿಸಲು ಮತ್ತು ನಿರ್ವಹಿಸಲು ಸಾಧ್ಯವಿಲ್ಲ.

ಇದುವೇ ಶಿಕ್ಷಿತರ ಅಪಾಯವನ್ನು ಹೆಚ್ಚಿಸುತ್ತದೆ. ಶಿಕ್ಷಿತ ವ್ಯಕ್ತಿಗಳು ಧಾರ್ಮಿಕ ಗ್ರಂಥಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ವ್ಯಾಖ್ಯಾನಿಸಿ, ಹಿಂಸೆಯನ್ನು ನ್ಯಾಯಸಮ್ಮತಗೊಳಿಸಲು ಪ್ರಯತ್ನಿಸುತ್ತಾರೆ. ತಮ್ಮ ಬುದ್ಧಿವಂತಿಕೆಯನ್ನು ಪ್ರಚಾರ ಮತ್ತು ನೇಮಕಾತಿಗಾಗಿ ಬಳಸುತ್ತಾರೆ, ಇತರರನ್ನು ಮನವೊಲಿಸುವ ಸಾಮರ್ಥ್ಯ ಹೊಂದಿರುತ್ತಾರೆ. ಇಂಥ ವ್ಯಕ್ತಿಗಳು ಕೇವಲ ಭಾವನಾತ್ಮಕತೆಯಿಂದ ಪ್ರೇರಿತರಾಗಿರುವುದಿಲ್ಲ, ಬದಲಿಗೆ ತಮ್ಮ ವಿರೂಪಗೊಂಡ ಸಿದ್ಧಾಂತವನ್ನು ಸರಿ ಎಂದು ನಂಬಿ, ವ್ಯವಸ್ಥಿತವಾಗಿ ಯೋಜನೆಗಳನ್ನು ಕಾರ್ಯಗತ ಗೊಳಿಸುತ್ತಾರೆ.

ಇದರ ಪರಿಣಾಮವಾಗಿ, ಅವರು ಸಮಾಜಕ್ಕೆ ಹೆಚ್ಚು ಅಪಾಯಕಾರಿ ಎಂಬುದು ಸ್ಪಷ್ಟ. ದೆಹಲಿ ಸ್ಫೋಟದಂಥ ಘಟನೆಗಳ ಹಿಂದೆ ಅದೆಷ್ಟು ಯೋಜನೆ, ತಾಂತ್ರಿಕ ಜ್ಞಾನ ಮತ್ತು ಸಮನ್ವಯವಿದೆ ಎಂಬುದು ಅರಿವಾಗುತ್ತದೆ. ಕಚ್ಚಾ ಬಾಂಬ್‌ಗಳನ್ನು ಬಳಸಿ ನಡೆಸುವ ದಾಳಿಗಳಿಗಿಂತ ಇಂಥ ಸ್ಫೋಟಗಳು ಹೆಚ್ಚು ಸೂಕ್ಷ್ಮವಾದಂಥವು.

ಸುಧಾರಿತ ಸ್ಫೋಟಕಗಳ ಬಳಕೆ, ಗುಪ್ತ ಸಂವಹನ ಮಾರ್ಗಗಳು, ಜಿಪಿಎಸ್ ಟ್ರ್ಯಾಕಿಂಗ್ ಮತ್ತು ಗುರಿಗಳ ಬಗ್ಗೆ ನಿಖರ ಮಾಹಿತಿ ಸಂಗ್ರಹಣೆ ಇವೆಲ್ಲವನ್ನೂ ಅನಕ್ಷರಸ್ಥರು ಅಥವಾ ಕೇವಲ ಭಾವನಾತ್ಮಕವಾಗಿ ಪ್ರೇರಿತರಾದವರು ಮಾಡಲು ಸಾಧ್ಯವಿಲ್ಲ. ಶಿಕ್ಷಣವು ಎಂದಿಗೂ ಅಪಾಯಕಾರಿಯಲ್ಲ. ಅಪಾಯ ಇರುವುದು ಶಿಕ್ಷಣವನ್ನು ದುರುಪಯೋಗ ಪಡಿಸಿಕೊಳ್ಳುವುದರಲ್ಲಿ, ಮತ್ತು ಮೂಲಭೂತವಾದಿ ವಿಚಾರಗಳನ್ನು ಆಳವಾಗಿ ಬೇರೂರಿಸುವು ದರಲ್ಲಿ.

ಈ ವಿದ್ಯಮಾನದ ಹಿಂದಿನ ಕೆಲವು ಕಾರಣಗಳನ್ನು ವಿಶ್ಲೇಷಿಸುವುದು ಅಗತ್ಯ: ಇಸ್ಲಾಮಿಕ್



ಮೂಲಭೂತವಾದಿ ಗುಂಪುಗಳು ಧರ್ಮವನ್ನು ತಮ್ಮ ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತವೆ. ಅವು ಕುರಾನ್ ಮತ್ತು ಹದೀಸ್‌ಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ವ್ಯಾಖ್ಯಾನಿಸಿ, ಯುವಕರನ್ನು ಉಗ್ರಗಾಮಿ ಕೃತ್ಯಗಳಿಗೆ ಪ್ರೇರೇಪಿಸುತ್ತವೆ.

ಕೆಲವು ವಿದ್ಯಾವಂತ ಮುಸ್ಲಿಂ ಯುವಕರು ಸಮಾಜದಲ್ಲಿ ಅನ್ಯರು ಎಂಬ ಭಾವನೆಗೆ ಒಳಗಾಗಿರಬಹುದು. ರಾಜಕೀಯ, ಆರ್ಥಿಕ ಅಥವಾ ಸಾಮಾಜಿಕ ಕಾರಣಗಳಿಂದಾಗಿ ತಮ್ಮ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂಬ ನಂಬಿಕೆ ಅವರಲ್ಲಿ ಬೆಳೆದು, ಮೂಲಭೂತ ವಾದಿ ಗುಂಪುಗಳೆಡೆಗೆ ವಾಲುವಂತೆ ಮಾಡಿರಬಹುದು.

ಅಂತರ್ಜಾಲವು ಮೂಲಭೂತವಾದಿ ಪ್ರಚಾರಗಳಿಗೆ ಪ್ರಬಲ ವೇದಿಕೆಯಾಗಿದೆ. ವಿದ್ಯಾವಂತ ಯುವಕರು ಈ ವೇದಿಕೆಗಳನ್ನು ಹೆಚ್ಚು ಬಳಸುವವರಾಗಿರುವುದರಿಂದ, ಇಂಥ ಪ್ರಚಾರಗಳಿಗೆ ಸುಲಭವಾಗಿ ಒಳಗಾಗುತ್ತಾರೆ ಮತ್ತು ತಮ್ಮದೇ ಆದ ಇಕೋ ಚೇಂಬರ್‌ಗಳನ್ನು ಸೃಷ್ಟಿಸಿಕೊಳ್ಳುತ್ತಾರೆ.

ಮೂಲಭೂತವಾದಿ ಸಿದ್ಧಾಂತಗಳ ವಿರುದ್ಧ ಪ್ರಬಲವಾದ ಮತ್ತು ಮನವೊಲಿಸುವ ಪ್ರತಿ ನಿರೂಪಣೆಗಳನ್ನು ರೂಪಿಸುವಲ್ಲಿನ ವೈಫಲ್ಯ. ಮುಖ್ಯವಾಹಿನಿ ಮುಸ್ಲಿಂ ಧಾರ್ಮಿಕ ಮುಖಂಡರು ಮತ್ತು ಸರಕಾರಗಳು ಈ ವಿಷಯದಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಿದೆ.

ಶಿಕ್ಷಣವು ಸ್ವತಃ ಅಪಾಯಕಾರಿಯಲ್ಲ, ಆದರೆ ಅದನ್ನು ಯಾವ ಸಿದ್ಧಾಂತದಿಂದ ಪ್ರಭಾವಿತವಾಗಿ ಬಳಸಲಾಗುತ್ತದೆ ಎಂಬುದು ನಿರ್ಣಾಯಕ. ಈ ನೂತನ ಬೆದರಿಕೆಯನ್ನು ಅರ್ಥ ಮಾಡಿಕೊಂಡು ಅದನ್ನು ಎದುರಿಸಲು ಹೊಸ ಕಾರ್ಯತಂತ್ರಗಳನ್ನು ರೂಪಿಸುವುದು ಅತ್ಯಗತ್ಯ. ಶಿಕ್ಷಣವು ಧನಾತ್ಮಕ ಶಕ್ತಿಯಾಗಿ ಪರಿವರ್ತಿತವಾಗಬೇಕೇ ಹೊರತು, ವಿನಾಶಕಾರಿ ಶಕ್ತಿಯಾಗಿ ಅಲ್ಲ.

ಈ ವಿದ್ಯಮಾನವು ಒಂದು ನಿರ್ದಿಷ್ಟ ಸಮುದಾಯಕ್ಕೆ ಸೀಮಿತವಲ್ಲ, ಬದಲಿಗೆ ಮೂಲ ಭೂತವಾದಕ್ಕೆ ಒಳಗಾಗುವ ಯಾವುದೇ ವ್ಯಕ್ತಿಗೂ ಅನ್ವಯಿಸುತ್ತದೆ. ಹಾಗಾಗಿ, ಈ ಸಮಸ್ಯೆಯನ್ನು ಸಮಗ್ರವಾಗಿ ಅರ್ಥ ಮಾಡಿಕೊಂಡು, ಸೂಕ್ತ ಪರಿಹಾರಗಳನ್ನು ಕಂಡು ಹಿಡಿಯುವುದು ರಾಷ್ಟ್ರದ ಭದ್ರತೆ ಮತ್ತು ಅಭಿವೃದ್ಧಿಗೆ ಅನಿವಾರ್ಯವಾಗಿದೆ.

ಕೇವಲ ಬಡತನ ಅಥವಾ ಅನಕ್ಷರತೆಯನ್ನು ದೂಷಿಸುವುದರಿಂದ ಪ್ರಯೋಜನವಿಲ್ಲ, ಬದಲಿಗೆ ಮೂಲಭೂತವಾದಿ ಸಿದ್ಧಾಂತಗಳ ಬೌದ್ಧಿಕ ಬೇರುಗಳನ್ನು ಗುರುತಿಸಿ ಕಿತ್ತೊಗೆಯ ಬೇಕಿದೆ. ಶಿಕ್ಷಣವು ಒಳ್ಳೆಯದನ್ನೇ ಮಾಡುತ್ತದೆ. ಆದರೆ, ಅದನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತದೆ ಎನ್ನುವುದು ಅತಿ ಮುಖ್ಯ.

- ಲೀನಾ ಕಾಮತ ಜೋಶಿ

16-11-2025 ದಿನ ಭವಿಷ್ಯ

ಮೇಷ: ನೀವು ಮಾನಸಿಕವಾಗಿ ಅತ್ಯಂತ ದುರ್ಬಲರಾಗಿರುತ್ತೀರಿ - ಆದ್ದರಿಂದ ನೀವು ನೋವಿಗೀಡಾಗಬಹುದಾದ ಸಂದರ್ಭಗಳಿಂದ ದೂರ ಉಳಿಯಿರಿ. ಗಡಿಬಿಡಿಯ ನಿರ್ಧಾರಗಳನ್ನು ಕೈಗೊಳ್ಳಬೇಡಿ - ವಿಶೇಷವಾಗಿ ಪ್ರಮುಖ ಹಣಕಾಸಿನ ವ್ಯವಹಾರಗಳ ಬಗ್ಗೆ ಮಾತನಾಡುವಾಗ. ನಿಮ್ಮ ಹತ್ತವರ ಆರೋಗ್ಯದ ಬಗೆಗೆ ಹೆಚ್ಚುವರಿ ಗಮನ ಮತ್ತು ಎಚ್ಚರಿಕೆ ಅಗತ್ಯವಿದೆ.

ವೃಷಭ: ಯಾವುದಾದರೂ ಸೃಜನಾತ್ಮಕ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಸೋಮಾರಿಯಾಗಿ ಕುಳಿತುಕೊಳ್ಳುವ ನಿಮ್ಮ ಅಭ್ಯಾಸ ಮಾನಸಿಕ ಶಾಂತಿಗೆ ಮಾರಣಾಂತಿಕವಾಗಬಹುದು. ನಿಮ್ಮ ಹಿಂದಿನ ಸಾಲವನ್ನು ಇಂದಿನವರೆಗೂ ಮರುಪಾವತಿ ಮಾಡದೇ ಇರುವ ನಿಮ್ಮ ಸಂಬಂಧಿಕರಿಗೆ ಇಂದು ಸಾಲ ಕೊಡಬಾರದು.

ಮಿಥುನ: ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ. ಮಕ್ಕಳು ಅಭ್ಯಾಸಗಳ ಮೇಲೆ ಗಮನ ಹರಿಸಬೇಕು.

ಕರ್ಕಾಟಕ: ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂ

ಭಾವ ಲಹರಿ

ಮೊದಲ ಬಾರಿಗೆ ಮೃತ್ಯುವನ್ನು ಸೋಲಿಸಿದ ಮೃತ್ಯುಂಜಯ

ಒಂದು ವೇಳೆ ವಿದ್ಯುಚ್ಛಕ್ತಿ ಉತ್ಪಾದನೆ ಏನಾದರೂ ನಿಂತುಹೋದರೆ, ತಕ್ಷಣ ಅದರ ಕೆಲಸವನ್ನು ನಿಭಾಯಿಸುವಂಥ ಸ್ಟ್ಯಾಂಡ್ ಬೈ ವ್ಯವಸ್ಥೆಯೂ ಇರಬೇಕು. ವಿದ್ಯುತ್ತಿನ ಜತೆಯಲ್ಲಿ, ತನ್ನ ಅಗತ್ಯಕ್ಕೆ ಬೇಕಾದ ಇತರ ಎಲ್ಲ ವಸ್ತುಗಳನ್ನು ತಾನೇ ಪೂರೈಸಿ ಕೊಳ್ಳಬೇಕು. ಈ ಪಂಪು, ಅಗತ್ಯಕ್ಕೆ ತಕ್ಕ ಹಾಗೆ, ತನ್ನ ಪಂಪಿಂಗ್ ಸಾಮರ್ಥ್ಯವನ್ನು ಹೆಚ್ಚು ಮಾಡಬೇಕಾಗುತ್ತದೆ; ಕೆಲವು ಸಲ ಸಾವಕಾಶವಾಗಿ ಪಂಪ್ ಮಾಡಬೇಕಾಗುತ್ತದೆ.

ಒಂದಿರುಗಿ ನೋಡಿದಾಗ ನಮಗೆ ಒಂದು ಪಂಪ್ ಬೇಕಾಗಿದೆ. ಈ ಪಂಪ್, ನಿಮಿಷಕ್ಕೆ 70 ಸಲ ಪಂಪ್ ಮಾಡಬೇಕು. ಪ್ರತಿಸಲವೂ ಸುಮಾರು 80 ಎಂ.ಎಲ್ ದ್ರಾವಣವನ್ನು ಪಂಪ್ ಮಾಡಬೇಕು. ಈ ದ್ರಾವಣವು ಪ್ರತಿಸಲ 100000 ಕಿ.ಮೀ. ಉದ್ದದ ಕೊಳವೆ ವ್ಯವಸ್ಥೆಯಲ್ಲಿ ಏಕಮುಖವಾಗಿ ಚಲಿಸಬೇಕು. ಅಂದರೆ ಒಂದು ನಿಮಿಷದಲ್ಲಿ ಸುಮಾರು 5 ಲೀಟರ್ ದ್ರಾವಣವನ್ನು, ಅಂದರೆ ಒಂದು ಗಂಟೆಯಲ್ಲಿ 300 ಲೀಟರ್ ದ್ರಾವಣವನ್ನು, 24 ಗಂಟೆಯಲ್ಲಿ 7200 ಲೀಟರ್ ದ್ರಾವಣವನ್ನು ಪಂಪ್ ಮಾಡಬೇಕು.

ಅಂದರೆ ಒಂದು ವರ್ಷದಲ್ಲಿ ಸುಮಾರು 2600000 ಲೀಟರ್ ದ್ರಾವಣವನ್ನು ಪಂಪ್ ಮಾಡುವ ಸಾಮರ್ಥ್ಯವಿರಬೇಕು. ಒಂದು ದಿನದಲ್ಲಿ 100000 ಸಲ ಪಂಪ್ ಮಾಡುವುದರ ಜತೆಯಲ್ಲಿ, ಪ್ರತಿವರ್ಷ 35 ದಶಲಕ್ಷ (ಮಿಲಿಯನ್) ಸಲ ಪಂಪ್ ಮಾಡಬೇಕು ಹಾಗೂ ತನ್ನ ಜೀವಮಾನದಲ್ಲಿ 2.5 ಶತಕೋಟಿ (ಬಿಲಿಯನ್) ಸಲ ಪಂಪ್ ಮಾಡಬೇಕು. ಈ ಪಂಪ್, ತನ್ನ ಕೆಲಸಕ್ಕೆ ಅಗತ್ಯವಾದ ವಿದ್ಯುಚ್ಛಕ್ತಿಯನ್ನು ತಾನೇ ಉತ್ಪಾದಿಸಿಕೊಳ್ಳಬೇಕು.

ಒಂದು ವೇಳೆ ವಿದ್ಯುಚ್ಛಕ್ತಿ ಉತ್ಪಾದನೆ ಏನಾದರೂ ನಿಂತುಹೋದರೆ, ತಕ್ಷಣ ಅದರ ಕೆಲಸವನ್ನು ನಿಭಾಯಿಸುವಂಥ ಸ್ಟ್ಯಾಂಡ್ ಬೈ ವ್ಯವಸ್ಥೆಯೂ ಇರಬೇಕು. ವಿದ್ಯುತ್ತಿನ ಜತೆಯಲ್ಲಿ, ತನ್ನ ಅಗತ್ಯಕ್ಕೆ ಬೇಕಾದ ಇತರ ಎಲ್ಲ ವಸ್ತುಗಳನ್ನು ತಾನೇ ಪೂರೈಸಿ ಕೊಳ್ಳಬೇಕು. ಈ ಪಂಪು, ಅಗತ್ಯಕ್ಕೆ ತಕ್ಕ ಹಾಗೆ, ತನ್ನ ಪಂಪಿಂಗ್ ಸಾಮರ್ಥ್ಯವನ್ನು ಹೆಚ್ಚು ಮಾಡಬೇಕಾಗುತ್ತದೆ; ಕೆಲವು ಸಲ ಸಾವಕಾಶವಾಗಿ ಪಂಪ್ ಮಾಡಬೇಕಾಗುತ್ತದೆ.

ಒಟ್ಟಿನಲ್ಲಿ ಸಮಯ ಸಂದರ್ಭಕ್ಕೆ ತಕ್ಕ ಹಾಗೆ ಕೆಲಸ ಮಾಡುವ ಗುಣವಿರಬೇಕು. ಈ ಪಂಪ್ 70-100 ವರ್ಷಗಳ ಕಾಲ ನಿರಂತರವಾಗಿ ಪಂಪ್ ಮಾಡುತ್ತಲೇ ಇರಬೇಕು.

ಒಂದೇ ಒಂದು ನಿಮಿಷವೂ ವಿಶ್ರಾಂತಿಯನ್ನು ತೆಗೆದುಕೊಳ್ಳುವ ಹಾಗಿಲ್ಲ, ಬಿಸಿಲು, ಮಳೆ, ಗಾಳಿಯೆಂದು ಗೊಣಗದೆ, ದಿನದ 24 ಗಂಟೆಯೂ ಕೆಲಸ ಮಾಡುತ್ತ, ಸಣ್ಣಪುಟ್ಟ ದುರಸ್ಥಿ ಕಾರ್ಯಗಳನ್ನು ತಾನೇ ಮಾಡಿಕೊಳ್ಳಬೇಕು. ದುರಸ್ಥಿಗೆಂದು ಕೆಲಸವನ್ನು ಮಾತ್ರ ನಿಲ್ಲಿಸುವ ಹಾಗಿಲ್ಲ. ಕೆಲಸವನ್ನು ಮಾಡುತ್ತಲೇ ದುರಸ್ಥಿಯನ್ನು ಮಾಡಿಕೊಳ್ಳಬೇಕು. ಈ ಪಂಪ್ ಅಡಕನಾಗಿರಬೇಕು (ಕಾಂಪ್ಯಾಕ್ಟ್). ಒಬ್ಬ ವ್ಯಕ್ತಿಯ ಮುಷ್ಟಿಗಿಂತ ಬೆಂಗಳೂರು 12112025 ಬುಧವಾರ ದೊಡ್ಡದು ಇರಬಾರದು. ಈ ಪಂಪಿನ ಶಕ್ತಿಯ ದಕ್ಷತೆ (ಎನರ್ಜಿ ಎಫಿಶಿಯನ್ಸಿ) ಶೇ.90ಕ್ಕೂ ಮಿಗಿಲಾಗಿರಬೇಕು. ಇಂಥ ಒಂದು ಪಂಪ್ ನಮಗೆ ಬೇಕಾಗಿದೆ. ಅದುವೇ ನಮ್ಮ ನಿಮ್ಮ ಎಲ್ಲರ ಎದೆಗೂಡಿನಲ್ಲಿ ಮಿಡಿಯುತ್ತಿರುವ ಹೃದಯ ಎನ್ನುವ ಪಂಪ್!

ಈ ಪಂಪಿನಲ್ಲಿ ಉತ್ಪಾದನೆಯಾಗುವ ವಿದ್ಯುತ್ತಿನಲ್ಲಿ ಅಥವಾ ವಿತರಣೆಯ ಜಾಲದಲ್ಲಿ ಏನಾದರೂ ದೋಷಗಳುಂಟಾದಾಗ, ವಿದ್ಯುತ್ ಸರಬರಾಜು ಹಠಾತ್ ನಿಲ್ಲಬಹುದು. ಆಗ ಹೃದಯವೂ ತನ್ನ ಕೆಲಸವನ್ನು ಹಠಾತ್ತನೇ ನಿಲ್ಲಿಸುತ್ತದೆ. ಇದುವೇ ಹೃದಯ ಸ್ತಂಭನ ಅಥವಾ ಕಾರ್ಡಿಯಾಕ್ ಅರೆಸ್ಟ್.

ಕೆಲವು ಸಲ ಹೃದಯವು ಅನಿಯಮಿತವಾಗಿ ಹಾಗೂ ಅತಿ ವೇಗವಾಗಿ ತುಡಿಯಲಾರಂಭಿಸುತ್ತದೆ. ಹೃದಯ ಸ್ನಾಯುವಿನ ಈ ಅಸಹಜ ಮಿಡಿತವು ಅಪಾಯಕಾರಿ. ಇದನ್ನು ತತ್ತರಿಕೆ (ಫಿಬ್ರಿಲ್ಲೇಶನ್) ಎನ್ನುವರು. ಇದನ್ನು ತ್ವರಿತವಾಗಿ ಸರಿಪಡಿಸದಿದ್ದರೆ, ಜೀವಾಪಾಯ ಖಂಡಿತ! 1899. ಜೀನ್ ಲೂಯಿಸ್ ಪ್ರೆವೋಸ್ಟ್ ಮತ್ತು ಫ್ರೆಡೆರಿಕ್ ಬ್ಯಾಟೆಲ್ಲಿ ಎಂಬ ಸಂಶೋಧಕರು ಸ್ವಿಜ್ಜರ್ಲೆಂಡಿನ ಜಿನೀವ ವಿಶ್ವವಿದ್ಯಾಲಯದಲ್ಲಿ ಸಂಶೋಧನೆಯನ್ನು ನಡೆಸುತ್ತಿದ್ದರು. ಇವರು ನಾಯಿಯ ಹೃದಯದ ಮೇಲೆ ಪ್ರಯೋಗವನ್ನು ಮಾಡುತ್ತಿದ್ದರು. ನಾಯಿಗೆ ಅರಿವಳಿಕೆಯನ್ನು ನೀಡಿದರು. ಒಂದು ಎಲೆಕ್ಟ್ರೋಡನ್ನು ನಾಯಿಯ ಬಾಯಿಯಲ್ಲಿ ಹಾಗೂ ಮತ್ತೊಂದನ್ನು ಅದರ ಕರುಳಿನಲ್ಲಿ ಇಟ್ಟರು. ಅತ್ಯಲ್ಪ ಪ್ರಮಾಣದ ವಿದ್ಯುತ್ತನ್ನು ಹಾಯಿಸಿದರು.

ಆ ವಿದ್ಯುತ್ತು, ನಾಯಿಯ ಹೃದಯದ ಮಿಡಿತದ ಗತಿಯನ್ನು ಅಲ್ಲೋಲ ಕಲ್ಲೋಲ ಮಾಡಿತು. ಆಗ ಹೃದಯವು ಥರಗುಟ್ಟಲಾರಂಭಿಸಿತು. ಆಗ ತಕ್ಷಣವೇ ಸ್ವಲ್ಪ ದೊಡ್ಡ ಪ್ರಮಾಣದ ವಿದ್ಯುತ್ತನ್ನು ಹಾಯಿಸಿದರು. ಕೂಡಲೇ ಆ ನಾಯಿಯ ಹೃದಯದ ಥರಗುಟ್ಟುವಿಕೆಯು (ತತ್ತರಿಕೆಯು) ಸಂಪೂರ್ಣವಾಗಿ ಮಾಯವಾಯಿತು.

ಹೃದಯದ ತತ್ತರಿಕೆಗೆ ಕಾರಣ ವಿದ್ಯುತ್ತು! ಆ ತತ್ತರಿಕೆಯನ್ನು ನಿವಾರಿಸಿದ್ದೂ ವಿದ್ಯುತ್ತು! ಹರಿಯುವ ವಿದ್ಯುತ್ ಪ್ರಮಾಣವು ನಾಯಿಯನ್ನು ಕೊಲ್ಲುತ್ತಿತ್ತು ಇಲ್ಲವೇ ಜೀವವನ್ನು ಉಳಿಸುತ್ತಿತ್ತು! 1947. ಅಮೆರಿಕನ್ ಹೃದಯ ಶಸ್ತ್ರವೈದ್ಯ ಕ್ಲಾಡ್ ಶೇಫರ್ ಬೆಕ್ (1894-1971), ಓರ್ವ ಹದಿಹರೆಯದ ಹುಡುಗನ ಹೃದಯದ ಮೇಲೆ ಶಸ್ತ್ರಚಿಕಿತ್ಸೆಯನ್ನು ನಡೆಸುತ್ತಿದ್ದ. ಕೂಡಲೇ ಹೃದಯಸ್ತಂಭನವು ಸಂಭವಿಸಿತು. ಆಗ ಕ್ಲಾಡ್ ಬೆಕ್ ಎರಡು ವಿದ್ಯುತ್ ಒರೆ (ಇಲೆಕ್ಟಿಕ್ ಪ್ಯಾಡಲ್) ಎದೆಯ ಮೇಲೆ ಎರಡು ಕಡೆ ಇಟ್ಟ. ನಿಗದಿತ ಪ್ರಮಾಣದ ವಿದ್ಯುತ್ ಶಾಕ್ ನೀಡಿದ.

ಸ್ಥಗಿತವಾಗಿದ್ದ ಹೃದಯವು ಮತ್ತೆ ಕೆಲಸವನ್ನು ಮಾಡಲಾರಂಭಿಸಿತು. ಇಂಥ ಪವಾಡ ಈ ಹಿಂದೆ ಎಲ್ಲೂ ನಡೆದಿರಲಿಲ್ಲ. ಮೃತ್ಯುಮುಖದಲ್ಲಿದ್ದ ಹುಡುಗನ ಜೀವವನ್ನು ಒಂದು ಬಟನ್ ಒತ್ತುವುದರ ಮೂಲಕ ಜೀವ ಮತ್ತೆ ಹಿಮ್ಮರಳುವಂತೆ ಮಾಡಿದ. ಮೊದಲ ಬಾರಿ ಮೃತ್ಯುವನ್ನು ಸೋಲಿಸಿದ ಕೀರ್ತಿ ಮನುಷ್ಯನಿಗೆ ದಕ್ಕಿತು!

ಎರಡನೆಯ ಮಹಾಯುದ್ಧ ವಿಶ್ವದ ಎರಡನೆಯ ಮಹಾಯುದ್ಧವು ಬಹು ದೊಡ್ಡ ಪ್ರಮಾಣದಲ್ಲಿ ನಡೆಯಿತು. ಈ ಯುದ್ಧದಲ್ಲಿ ಜೆಟ್ ವಿಮಾನಗಳನ್ನು, ರಡಾರುಗಳನ್ನು ಹಾಗೂ ಪರಮಾಣು ಬಾಂಬುಗಳನ್ನು ಬಳಸಿದ ವಿಷಯ ನಮಗೆ ತಿಳಿದೇ ಇದೆ. ವೈದ್ಯ ವಿಜ್ಞಾನದ ಮುಂದಿನ ಮೈಲಿಗಲ್ಲನ್ನು ನೆಡಲು ಈ ಫೈಟರ್ ಪೈಲಟ್ಟುಗಳು ನೆರವಾದರು.

ಗುರುತ್ವಾಕರ್ಷಣೆ ಅಥವಾ ಗ್ರಾವಿಟೇಷನ್ ನಮಗೆಲ್ಲ ಗೊತ್ತು. ಇದನ್ನು ಜಿ ಎಂದು ಸಂಕ್ಷಿಪ್ತವಾಗಿ ದಾಖಲಿಸುವುದು ವಾಡಿಕೆ. ಭೂಮಿಯು ನಮ್ಮ ದೇಹವನ್ನು 9.8 ಮೀಟರ್/ಸೆಕೆಂಡ್ ಸ್ಕ್ವೇರ್ ವೇಗೋತ್ಕರ್ಷದಲ್ಲಿ (ಆಕ್ಸಿಲರೇಷನ್) ತನ್ನೆಡೆಗೆ ಸೆಳೆಯುತ್ತಿರುತ್ತದೆ. ಇದು ನಮ್ಮ ಅನುಭವಕ್ಕೆ ಬರುವುದಿಲ್ಲ. ಇದು 1-ಜಿಗೆ ಸಮ. ಜೆಟ್ ವಿಮಾನಗಳಲ್ಲಿ ಸಂಚರಿಸುವಾಗ ಪೈಲಟ್ಟುಗಳು 4-6 ಜಿ ಅನುಭವಕ್ಕೆ ಒಳಗಾಗಬಹುದು.

5-ಜಿ ಗಿಂತ ಹೆಚ್ಚಿನ ಜಿ ಯನ್ನು ಹೈ ಜಿ-ಫೋರ್ಸ್ ಎಂದು ಕರೆಯುವರು. ಈ ಹೆಚ್ಚಿನ ಜಿ ವೇಗೋತ್ಕರ್ಷಕ್ಕೆ ಸಿಲುಕಿದ ದೇಹದ ರಕ್ತದಲ್ಲಿ ಬಹುಪಾಲು ರಕ್ತವು ದೇಹದ ಕೆಳಗಿನ ಭಾಗಕ್ಕೆ ಹರಿದು, ಮಿದುಳಿಗೆ ಸರಬರಾಜಾಗುವ ರಕ್ತದ ಪ್ರಮಾಣವು ಕಡಿಮೆಯಾಗುತ್ತದೆ. ಆಗ ಕಣ್ಣು ಕತ್ತಲಿಡುತ್ತದೆ ಹಾಗೂ ಕ್ರಮೇಣ ಸ್ಮೃತಿಯು ಪೂರ್ಣ ಪ್ರಮಾಣದಲ್ಲಿ ನಾಶವಾಗುತ್ತದೆ.

ಪೈಲಟ್ಟನ್ನು ಈ ಪ್ರಜ್ಞಾಹೀನ ಸ್ಥಿತಿಯಿಂದ ಬೇಗ ಸ್ಮೃತಿಗೆ ತರದಿದ್ದರೆ, ಮಿದುಳಿಗೆ ಶಾಶ್ವತ ಹಾನಿಯಾಗಬಹುದು ಹಾಗೂ ಪ್ರಜ್ಞಾಹೀನ ಸ್ಥಿತಿಯಲ್ಲಿಯೇ ಜೀವವು ಹೋಗಬಹುದು. 1956. ಆಸ್ಟ್ರಿಯಾ ಸಂಜಾತ ಪೀಟರ್ ಸೇಫರ್ (1924-2003) ಎಂಬ ಅರಿವಳಿಕೆಯ ತಜ್ಞ ಹಾಗೂ ಅಮೆರಿಕದ ಜೇಮ್ಸ್ ಓಟಿಸ್ ಈಲಮ್ (1918-1995) ಎಂಬ ಶ್ವಾಸಕೋಶಗಳ ಅಂಗಕ್ರಿಯಾ ಸಂಶೋಧಕ ಇಬ್ಬರೂ ಸೇರಿಕೊಂಡು, ಈಗಾಗಲೇ ವೈದ್ಯವಿಜ್ಞಾನವು ಮರೆತು ಹೋಗಿದ್ದ, ಬಾಯಿಂದ ಬಾಯಿಗೆ ಉಸಿರನ್ನು ತುಂಬುವ ವಿಧಾನವನ್ನು ಮರು-ಅನ್ವೇಷಿಸಿದರು.

ಪ್ರಜ್ಞೆ ತಪ್ಪಿರುವ ಪೈಲಟ್ಟನಿಗೆ ಈ ರೀತಿ ಕೃತಕ ಉಸಿರಾಟವನ್ನು ನೀಡುತ್ತಿದ್ದರೆ, ಜೀವ ಉಳಿಯುವಷ್ಟು ಆಕ್ಸಿಜನ್ ದೇಹಕ್ಕೆ ಪೂರೈಕೆಯಾಗುತ್ತದೆ ಎನ್ನುವ ವಿಚಾರವನ್ನು ಪ್ರಯೋಗ ಸಮೇತ ನಿರೂಪಿಸಿದರು. ಕೂಡಲೇ ಈ ವಿಧಾನವನ್ನು ಎಲ್ಲ ಪೈಲಟ್ಟುಗಳು ಕರಗತ ಮಾಡಿಕೊಂಡರು.

ಈಗ ಉಳಿದದ್ದು ಹೃದಯ ಮತ್ತು ಶ್ವಾಸಕೋಶಗಳನ್ನು ಒಟ್ಟಿಗೆ ಪುನಶ್ಚೇತನಗೊಳಿಸುವ ಪ್ರಮಾಣಬದ್ಧ ಕಾರ್ಯವಿಧಾನವನ್ನು ರೂಪಿಸುವುದಾಗಿತ್ತು.

ಶವವು ಮತ್ತೆ ಉಸಿರಾಡಿತು: 1960. ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ. ಡಾ. ವಿಲಿಯಂ ಕೌವೆನ್‌ಹೋವೆನ್ (1886-1975) ಎಂಬ ಇಲೆಕ್ಟ್ರಿಕಲ್ ಎಂಜಿನಿಯರ್. ಇವರು ತತ್ತರ ನಿವಾರಕ (ಡಿಫಿಬ್ರಿಲ್ಲೇಟರ್)ಗಳನ್ನು ಬಳಸಿ ನಾಯಿಗಳ ಮೇಲೆ ಅಧ್ಯಯನವನ್ನು ಮಾಡುತ್ತಿದ್ದರು. ಆಗ ಅವರು ಒಂದು ಕುತೂಹಲಕರ ವಿಚಾರವನ್ನು ಗಮನಿಸಿದರು. ಒಂದು ಸಲ ಶಾಕ್ ನೀಡಿ ಆದ ಮೇಲೆ, ಮತ್ತೊಂದು ಶಾಕ್ ನೀಡುವ ಮೊದಲು, ಎದೆಯ ಪ್ರದೇಶವನ್ನು ಒತ್ತಿದರೆ, ಅದು ಹೃದಯದಿಂದ ರಕ್ತವನ್ನು ಚಿಮ್ಮಿಸುತ್ತದೆ ಎನ್ನುವ ವಿಚಾರವನ್ನು ಮತ್ತೆ ಮತ್ತೆ ಪ್ರಯೋಗಗಳನ್ನು ಮಾಡಿ ಖಚಿತಪಡಿಸಿಕೊಂದರು.

ಇದನ್ನು ಸೇರ್- ಮತ್ತು ಈಲಮ್ ಅವರಿಗೆ ತಿಳಿಸಿದರು. ಮೂವರೂ ಸೇರಿ ಅಧ್ಯಯನವನ್ನು ಮುಂದುವರಿಸಿದರು. ಒಂದು ನಿಮಿಷದಲ್ಲಿ 60 ಸಲ ಎದೆಯನ್ನು ಒತ್ತಿ, ಎರಡು ಸಲ ಬಾಯಿಯಿಂದ ಬಾಯಿಗೆ ಗಾಳಿಯನ್ನು ತುಂಬಿದರೆ, ಹೃದಯವು ಮಿದುಳಿಗೆ ಅಗತ್ಯವಾದ ಆಕ್ಸಿಜನ್ ಅನ್ನು ರಕ್ತದ ಮೂಲಕ ಪೂರೈಸುತ್ತದೆ ಎನ್ನುವುದನ್ನು ಮನವರಿಕೆ ಮಾಡಿ ಕೊಂಡರು. ಈಗ ಪ್ರಪಂಚದ ಮುಂದೆ ಹೃದಯ ಮತ್ತು ಶ್ವಾಸಕೋಶಗಳನ್ನು ಏಕಕಾಲದಲ್ಲಿ ಪುನಶ್ಚೇತನಗೊಳಿಸುವ ಕಾರ್ಯವಿಧಾನ ಸಿಪಿಆರ್ ರೂಪುಗೊಂಡಿತು!

ರಿಸಸಿ ಆನಿ: ವಿಜ್ಞಾನಿಗಳೇನೋ ಪ್ರಮಾಣಬದ್ಧ ಸಿಪಿಆರ್ ಅನ್ನು ರೂಪಿಸಿದರು. ಆದರೆ ಇದನ್ನು ಎಲ್ಲ ಯೋಧರಿಗೆ ಹಾಗೂ ಶ್ರೀಸಾಮಾನ್ಯರಿಗೆ ಹೇಗೆ ಕಲಿಸುವುದು? ಬದುಕಿರುವವರ ಹಾಗೂ ಆರೋಗ್ಯವಾಗಿರುವವರ ಎದೆಯನ್ನು ಒತ್ತುವ ಅಥವಾ ಬಾಯಿಂದ ಬಾಯಿಗೆ ಉಸಿರನ್ನು ತುಂಬುವ ವಿಧಾನವನ್ನು ಕಲಿಯುವುದಂತೂ ಪ್ರಾಯೋಗಿಕವಾಗಿ ಅಸಾಧ್ಯವಾದ ಮಾತು. ಹಾಗಾಗಿ ಮಕ್ಕಳಿಂದ ಮುದುಕರವರೆಗೆ, ಎಲ್ಲರಿಗೂ ಸಿಪಿಆರ್ ಕಲಿಸುವುದು ಹೇಗೆ?

1961. ನಾರ್ವೇ ದೇಶದಲ್ಲಿ ಅಸ್ಮಂಡ್ ಲೆರ್ಡಾಲ್ ಎಂಬ ಬೊಂಬೆ ತಯಾರಕನಿದ್ದ. ಸೇಫರ್ ಹಾಗೂ ಅಸ್ಮಂಡ್ ಇಬ್ಬರು ಸೇರಿ ಮಾನವರೂಪಿ ಬೊಂಬೆಯೊಂದನ್ನು ತಯಾರಿಸಿದರು. ಆ ಬೊಂಬೆಗೆ ಮನುಷ್ಯನ ಮುಖವೊಂದನ್ನು ತೊಡಿಸಬೇಕಿತ್ತು.

ಫ್ರಾನ್ಸಿನ ಸೀನ್ ನದಿಯಲ್ಲಿ ಓರ್ವ ಅಜ್ಞಾತ ಮಹಿಳೆಯು ಮುಳುಗಿ ಸತ್ತಿದ್ದಳು. ಆಕೆಯ ಮುಖವನ್ನೇ ಈ ಹೊಸ ಬೊಂಬೆಗೆ ಜೋಡಿಸಿದರು. ಆ ಬೊಂಬೆಗೆ ಆನಿ ಎಂದು ಹೆಸರಿಟ್ಟರು. ಈಕೆಯ ಪೂರ್ತಿ ಹೆಸರು ಆನಿ ರಿಸಸಿ. ರಿಸಸಿ ಎನ್ನುವುದು ರಿಸಸಿಟೇಷನ್ ಅಥವಾ ಪುನಃಶ್ಚೇತನ ಎನ್ನುವ ಹೆಸರಿನ ಸಂಕ್ಷಿಪ್ತ ರೂಪ. ಆನಿಯ ಮುಖವು ಸುಂದರವಾಗಿದೆ ಹಾಗೂ ಪ್ರಶಾಂತವಾಗಿದೆ. ಬಾಯಿಯಿಂದ ಬಾಯಿಗೆ ಉಸಿರನ್ನು ತುಂಬುವ ವಿಧಾನವನ್ನು ಈಕೆಯ ಮೇಲೆ ಪ್ರಯೋಗಿಸಿ ಕಲಿಯಬೇಕಾಗುತ್ತಿತ್ತು.

ಹಾಗೆಯೇ ಎದೆಯನ್ನು ನಿಮಿಷಕ್ಕೆ 60 ಸಲ ಒತ್ತುವುದನ್ನು ಈಕೆಯ ಒಡಲಿನ ಮೇಲೆಯೇ ಕಲಿಯಬೇಕಾಗಿತ್ತು. ಹಾಗಾಗಿ ಆನಿ ಎಂಬ ಹೆಸರಿನ ಈ ಅಜ್ಞಾತ ಗುರುವು ಲಕ್ಷಾಂತರ ಜನರಿಗೆ ಸಿಪಿಆರ್ ಕಾರ್ಯವಿಧಾನವನ್ನು ಕಲಿಯಲು ಸಹಾಯ ಮಾಡಿದ್ದಾಳೆ.

ಸಿಪಿಆರ್ ಪ್ರಮಾಣಬದ್ಧವಾಗುತ್ತಿದ್ದ ಹಾಗೆ ಅಮೆರಿಕನ್ ಹಾರ್ಟ್ ಅಸೋಸಿಯೇಷನ್, ರೆಡ್ ಕ್ರಾಸ್ ಮತ್ತು ವಿಶ್ವದ ಮಿಲಿಟರಿ ಪಡೆಗಳು ಈ ಸಿಪಿಆರ್ ಕಾರ್ಯವಿಧಾನವನ್ನು ಕಲಿಸಲಾರಂಭಿಸಿದರು. ಈ ಬಗ್ಗೆ ಅನೇಕ ಪೋಸ್ಟರುಗಳು, ಪುಸ್ತಕಗಳು, ಕೈಪಿಡಿಗಳು, ರೇಡಿಯೋ ಹಾಗೂ ಟೆಲಿವಿಷನ್ ಕಾರ್ಯಕ್ರಮಗಳು ಮತ್ತು ಅಸಂಖ್ಯ ಕಾರ್ಯಾಗಾರಗಳನ್ನು ಜಗತ್ತಿನ ಎಲ್ಲ ದೇಶಗಳು ನಡೆಸಲಾರಂಭಿಸಿದವು.

ಕರ್ನಾಟಕದಲ್ಲಿ ರೆಡ್ ಕ್ರಾಸ್ ಮತ್ತು ಅನೇಕ ಆಸ್ಪತ್ರೆಗಳು ಸಿಪಿಆರ್ ಅನ್ನು ಕನ್ನಡ ಹಾಗೂ ಸ್ಥಳೀಯ ಭಾಷೆಗಳಲ್ಲಿ ಕಲಿಸುತ್ತಿವೆ. ಈಗ ಒಬ್ಬ ಹೈಸ್ಕೂಲು ವಿದ್ಯಾರ್ಥಿಯೂ, ಹೃದಯಾಘಾತ ಇಲ್ಲವೇ ಹೃದಯ ಸ್ತಂಭನವಾಗಿ ಮೃತ್ಯುಮುಖನಾಗಿರುವ ವಯಸ್ಕನನ್ನು ಮತ್ತೆ ಹಿಂದಕ್ಕೆ ಕರೆತರಬಲ್ಲ! ಸಿಪಿಆರ್, ಅಷ್ಟು ಶಕ್ತಿಶಾಲಿಯಾಗಿದೆ. ಮಕ್ಕಳೂ ತಮ್ಮ ಬರಿಗೈಯಲ್ಲಿ ಸಾವಿನೊಡನೆ ಯಶಸ್ವಿಯಾಗಿ ಹೋರಾಡಲು ಸಾಧ್ಯವಾಗಿದೆ.

ಸಮಯದೊಡನೆ ಸ್ಪರ್ಧೆ: ನಮ್ಮ ಇಡೀ ದೇಹಕ್ಕೆ ಎಷ್ಟು ಆಕ್ಸಿಜನ್ ಬೇಕೋ, ಅಷ್ಟು ಆಕ್ಸಿಜನ್‌ನನಲ್ಲಿ ಶೇ.20ರಷ್ಟನ್ನು ಮಿದುಳೊಂದೇ ಬಳಸಿಕೊಳ್ಳುತ್ತದೆ. ಮಿದುಳಿನ ನರಕೋಶಗಳು ಹೆಚ್ಚೆಂದರೆ 4 ನಿಮಿಷಗಳವರೆಗೆ ಜೀವವನ್ನು ಹಿಡಿದಿಟ್ಟುಕೊಳ್ಳಬಲ್ಲವು. ನಂತರ ಆಕ್ಸಿಜನ್ ಪೂರೈಕೆ ಒಂದು ನಿಮಿಷ ತಡವಾದರೆ ಶೇ.10ರಷ್ಟು ನರಕೋಶಗಳು ಸತ್ತಿರುತ್ತವೆ. ಮತ್ತೊಂದು ನಿಮಿಷ ತಡವಾದರೆ ಇನ್ನೂ ಶೇ.10ರಷ್ಟು ನರಕೋಶಗಳು ಸಾಯುತ್ತವೆ. ಹೀಗೆ ಒಂದೊಂದು ನಿಮಿಷ ತಡವಾದರೂ ಶೇ.10ರಷ್ಟು ನರಕೋಶಗಳು ಸಾಯುವುದು ಮುಂದುವರಿಯುತ್ತದೆ.

ಸಿಪಿಆರ್ ಎಂದರೆ ಸಮಯದೊಡನೆ ಸ್ಪರ್ಧೆ, ಸಾವಿನೊಡನೆ ಸ್ಪರ್ಧೆ. ಸಿಪಿಆರ್, ಮಿದುಳಿಗೆ ಅಗತ್ಯವಾದ ಆಕ್ಸಿಜನ್ ಅನ್ನು ತಾತ್ಕಾಲಿಕವಾಗಿ ಪೂರೈಸುತ್ತಿರುತ್ತದೆ.

ಅಷ್ಟರಲ್ಲಿ ಸೂಕ್ತ ಔಷಧಿಗಳು ಅಥವಾ ಡಿಫಿಬ್ರಿಲ್ಲೇಟರ್ ದೊರೆಯಬೇಕು. ಆಗ ಹೃದಯವು ಸ್ವತಂತ್ರವಾಗಿ ಕೆಲಸವನ್ನು ಮಾಡಲಾರಂಬಿಸಿ, ಸಾವನ್ನು ಸೋಲಿಸುತ್ತದೆ.

1970ರಿಂದ, ವಿದೇಶಗಳ ಅಂಬ್ಯುಲೆನ್ಸಿನಲ್ಲಿ ಸಿಪಿಆರ್ ತಜ್ಞರು, ಡಿಫಿಬ್ರಿಲ್ಲೇಟರ್ ಹಾಗೂ ತುರ್ತು ಔಷಧಿಗಳನ್ನು ನೀಡಬಲ್ಲ ನುರಿತವರು ಇರುತ್ತಾರೆ. ಭಾರತದಲ್ಲಿ ಹಾಗೂ ಬೆಂಗಳೂರಿನಲ್ಲಿ 5 ಜಿ ಆಂಬುಲೆನ್ಸ್ ಸೇವೆ ಈಗ ದೊರೆಯುತ್ತದೆ. 5 ಜಿ ಆಂಬುಲೆನ್ಸ್ ಎಂದರೆ ಐದನೆಯ ತಲೆಮಾರಿನ ವೈರ್ ಲೆಸ್ ನೆಟ್‌ವರ್ಕ್ ತಂತ್ರಜ್ಞಾನದ ಅನುಕೂಲತೆಯಿರುವಂಥದ್ದು.

ಆಂಬುಲೆನ್ಸ್ ಎಂದರೆ ರೋಗಿಯನ್ನು ಸಾಗಿಸುವ ವಾಹನ ಎಂದೇ ಬಹಳ ಜನರ ಕಲ್ಪನೆ. ಆದರೆ 5 ಜಿ ಅಂಬುಲೆನ್ಸ್ ಒಂದು ಸಂಚಾರಿ ತುರ್ತು ನಿಗಾ ಘಟಕ (ಎಮರ್ಜೆನ್ಸಿ ಇಂಟೆನ್ಸಿವ್ ಕೇರ್ ಯೂನಿಟ್) ಎಂದು ಹೆಚ್ಚಿನ ಜನರಿಗೆ ತಿಳಿದಿರಲಾರದು. ರೋಗಿಯು ಆಸ್ಪತ್ರೆಯನ್ನು ತಲುಪುವ ಮೊದಲೇ ಅಗತ್ಯವಾಗಿ ನೀಡಬೇಕಾದ ತುರ್ತು ಚಿಕಿತ್ಸೆಯನ್ನು ನೀಡಿ, ರೋಗಿಯ ಜೀವಾಧಾರಕ ಲಕ್ಷಣಗಳನ್ನು ಸ್ಥಿರಗೊಳಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸುವ ಒಂದು ಅದ್ಭುತ ಆಧುನಿಕ ವ್ಯವಸ್ಥೆಯಾಗಿದೆ.

ಇದರ ಫೋನ್ ನಂಬರ್ 1066 ಹಾಗೂ 108. ತುರ್ತು ಸಂದರ್ಭಗಳಲ್ಲಿ ಈ ನಂಬರಿಗೆ ಫೋನ್ ಮಾಡಲು ಮರೆಯಬೇಡಿ.

- ಡಾ.ನಾ. ಸೋಮೇಶ್ವರ

ಕನ್ನಡ ಕವನಗಳು ★★★★★★

ಮೌಲ್ಯಯುತ ಪುಷ್ಪಗಳಾಗೋಣ

ಬನ್ನಿರಿ ಬನ್ನಿರಿ ಕಂದಮ್ಮಗಳೇ
ತನ್ನಿರಿ ತನ್ನಿರಿ ಸುಮಗಳನು
ಹೂವಿನ ರಂಗೋಲಿ ಹಾಕ

ನಗರಸಭೆ ಮೀಸಲಾತಿ ಪ್ರಕಟ: ಚಟುವಟಿಕೆ ಬಿರುಸು

25 ವಾರ್ಡ್‌ನಲ್ಲೂ ಹೆಚ್ಚಿದ ಆಕಾಂಕ್ಷಿತರು | ರಾಜಕೀಯ ನಾಯಕರ ಮನವೊಲಿಸುವ ಕಸರತ್ತು

• ಪ್ರಜೋದಯ ವರದಿ

ಅರಸೀಕೆರೆ: ನಗರಸಭೆ ಚುನಾವಣೆಯ ಮೊದಲ ವೇದಿಕೆ ಎಂಬಂತೆ 25 ವಾರ್ಡ್‌ಗಳಿಗೆ ಮೀಸಲಾತಿ ಅಧಿಸೂಚನೆ ಪ್ರಕಟವಾಗಿದ್ದು ನಗರದಲ್ಲಿ ರಾಜಕೀಯ ಚಟುವಟಿಕೆಗಳು ಬಿರುಸು ಪಡೆದಿವೆ. ಇತ್ತೀಚಿನ ವರ್ಷಗಳಲ್ಲಿ ನಗರಸಭೆಯು ಅಭಿವೃದ್ಧಿಗಿಂತ ವಾದ ವಿವಾದಗಳಿಂದಲೇ ಖ್ಯಾತಿ ಪಡೆದಿದೆ. ಹಲವಾರು ಕಾರಣಗಳಿಂದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಗಮನ ಸೆಳೆದಿರು ವುದು ಜಗಜ್ಜಾಹಿರಾಗಿದೆ. ಈ ರೀತಿಯ ಘಟನೆಗಳೆಲ್ಲಾ ನಡೆದರೂ ನಗರಸಭೆ ಚುನಾವಣೆಗೆ ಸ್ಪರ್ಧಿಸಲು ಮಾಜಿ, ಹಾಲಿ ಹಾಗು ಹೊಸಬರು ಚುನಾವಣಾ ಕಣಕ್ಕೆ ಧುಮುಕಲು ಸಜ್ಜಾಗಿದ್ದಾರೆ.

ಆಕ್ಷೇಪಣೆಗೆ ಅವಕಾಶ

ಈ ನಡುವೆ ಕೆಲ ವಾರ್ಡ್‌ಗಳಲ್ಲಿ ಸ್ಪರ್ಧಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದ ಕೆಲವರಿಗೆ ಪ್ರಕಟಗೊಂಡಿರುವ ಮೀಸಲಾತಿಯಿಂದ ನಿರಾಸೆಯಾಗಿದೆ. ಆಕ್ಷೇಪಣೆ ಸಲ್ಲಿಸಲು ಅವಕಾಶ ಇರುವುದರಿಂದ ಮೀಸಲಾತಿ ತಿದ್ದುಪಡಿ ಮಾಡಿಸಿ ತಮಗೆ ಅವಕಾಶ ಕಲ್ಪಿಸಿಕೊಡುವಂತೆ ತಮ್ಮ ಪಕ್ಷದ ನಾಯಕರ ದುಂಬಾಲು ಬಿದ್ದಿದ್ದಾರೆ. ಆಕಾಂಕ್ಷಿಗಳ ಪಟ್ಟಿ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದ್ದು ರಾಜಕೀಯ ನಾಯಕರಿಗೆ ಕಗ್ಗಂಟಾಗಿ ಪರಿಣಮಿಸಿದೆ. ಮತ್ತೊಂದೆಡೆ ಅಪೇಕ್ಷಿತರ ಸಂತೈಸಿ ಒಬ್ಬರಿಗೆ ಅವಕಾಶ ಕಲ್ಪಿಸಿಕೊಡುವುದು ಸಹ ಕಾಂಗ್ರೆಸ್, ಜೆಡಿಎಸ್ ಹಾಗು ಬಿಜೆಪಿ ನಾಯಕರ ಜವಾಬ್ದಾರಿಯಾಗಿದೆ. ಮತ್ತೊಂದೆಡೆ ಯಾವ ಪಕ್ಷದ ಬಿ ಫಾರಂ ಬೇಡ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲ್ಲುವ ವಿಶ್ವಾಸದೊಂದಿಗೆ ಕೆಲವರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

> ನಗರದ ಮತದಾರರು ಪ್ರಜ್ಞಾವಂತರಿದ್ದು ಅಭಿವೃದ್ಧಿಗೆ ಆದ್ಯತೆ ನೀಡುತ್ತಾರೆ. ಕಳೆದ ಅವಧಿ ಯಲ್ಲಿ ನಾವು ಕೈಗೊಂಡಿರುವ ಅಭಿವೃದ್ಧಿ ಕೆಲಸಗಳು ಶ್ರೀರಕ್ಷೆಯಾಗಲಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರುವುದರಿಂದ ಮತದಾರರು ಅಭಿವೃದ್ಧಿಗೆ ಬೆಂಬಲ ನೀಡುತ್ತಾರೆಂಬ ವಿಶ್ವಾಸವಿದೆ. -ಎಂ. ಸಮೀವುಲ್ಲಾ,
> ನಗರಸಭೆ ನಿಕಟಪೂರ್ವ ಅಧ್ಯಕ್ಷ

> ಕ್ಷೇತ್ರ ರಾಜಕಾರಣದ ಆಳ ಅಗಲ ಅರಿತಿದ್ದೇನೆ. ಪ್ರತಿಪಕ್ಷದ ರಾಜಕೀಯ ತಂತ್ರಗಾರಿಕೆಯನ್ನು ಮೀರಿ ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸುತ್ತೇವೆ. ನಗರದ ಅಭಿವೃದ್ಧಿ ದೃಷ್ಟಿಯಿಂದ ನಮ್ಮದೇ ಯಾದ ದೃಷ್ಟಿಕೋನ ಹಾಕಿಕೊಂಡಿದ್ದೇವೆ. ನಮ್ಮ ಗೆಲುವು ತಡೆಯಲು ಯಾರಿಂದಲೂ ಸಾಧ್ಯವಿಲ್ಲ.
> -ಎನ್.ಆರ್.ಸಂತೋಷ್, ಜೆಡಿಎಸ್ ಮುಖಂಡ

ಕಾಂಗ್ರೆಸ್‌ಗೆ ಶಾಸಕರ ಬಲ

ಹಲವು ವರ್ಷಗಳಿಂದ ಜೆಡಿಎಸ್ ಅಭ್ಯರ್ಥಿಗಳೇ ಗೆಲುವು ಸಾಧಿಸುತ್ತಿದ್ದ ನಗರಸಭೆಯಲ್ಲಿ ಈಗ ಸಾಕಷ್ಟು ಬದಲಾವಣೆಗಳಾಗಿವೆ. ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕ ಕೆ.ಎಂ.ಶಿವಲಿಂಗೇಗೌಡ ಇರುವುದು ಹಾಗು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಆಡಳಿತ ನಡೆಸುತ್ತಿರುವುದರಿಂದ ಚುನಾವಣೆ ಮೇಲೆ ಪರಿಣಾಮ ಬೀರುತ್ತದೆ. ಮತ್ತೊಂದೆಡೆ ಬಿಜೆಪಿ-ಜೆಡಿಎಸ್ ಮೈತ್ರಿ ಮಾಡಿ ಕೊಂಡಿರುವುದರಿಂದ ಸೀಟು ಹಂಚಿಕೆ ಕುರಿತು ಗಂಭೀರ ಚರ್ಚೆಗಳು ನಡೆಯುತ್ತಿವೆ.

ನಗರಸಭೆ ಮೀಸಲಾತಿ ವಿವರ

ವಾರ್ಡ್ ನಂ. 1: ಹಿಂದುಳಿದ ವರ್ಗ (ಎ) ಮಹಿಳೆ, ವಾರ್ಡ್ ನಂ. 2: ಸಾಮಾನ್ಯ, ವಾರ್ಡ್ ನಂ. 3: ಹಿಂದುಳಿದ ವರ್ಗ (ಬಿ) ಮಹಿಳೆ, ವಾರ್ಡ್ ನಂ. 4: ಪರಿಶಿಷ್ಟ ಜಾತಿ, ವಾರ್ಡ್ ನಂ. 5: ಸಾಮಾನ್ಯ, ವಾರ್ಡ್ ನಂ. 6: ಹಿಂದುಳಿದ ವರ್ಗ (ಎ), ವಾರ್ಡ್ ನಂ. 7 ಮತ್ತು 8: ಪರಿಶಿಷ್ಟ ಜಾತಿ, ವಾರ್ಡ್ ನಂ. 9: ಸಾಮಾನ್ಯ ಮಹಿಳೆ, ವಾರ್ಡ್ ನಂ.10: ಹಿಂದುಳಿದ ವರ್ಗ (ಬಿ), ವಾರ್ಡ್ ನಂ. 11: ಹಿಂದುಳಿದ ವರ್ಗ (ಎ) ಮಹಿಳೆ, ವಾರ್ಡ್ ನಂ.12: ಪರಿಶಿಷ್ಟ ಪಂಗಡ, ವಾರ್ಡ್ ನಂ.13 ಮತ್ತು 14: ಸಾಮಾನ್ಯ, ವಾರ್ಡ್ ನಂ.15: ಪರಿಶಿಷ್ಟ ಜಾತಿ ಮಹಿಳೆ, ವಾರ್ಡ್ ನಂ. 16: ಸಾಮಾನ್ಯ ಮಹಿಳೆ, ವಾರ್ಡ್ ನಂ.17: ಹಿಂದುಳಿದ ವರ್ಗ (ಎ) ಮಹಿಳೆ, ವಾರ್ಡ್ ನಂ.18: ಪರಿಶಿಷ್ಟ ಜಾತಿ ಮಹಿಳೆ, ವಾರ್ಡ್ ನಂ.19 ಹಾಗು 20: ಸಾಮಾನ್ಯ, ವಾರ್ಡ್ ನಂ. 21: ಹಿಂದುಳಿದ ವರ್ಗ (ಎ), ವಾರ್ಡ್ ನಂ. 22: ಸಾಮಾನ್ಯ ಮಹಿಳೆ, ವಾರ್ಡ್ ನಂ. 23 ಮತ್ತು 24 ಸಾಮಾನ್ಯ, ವಾರ್ಡ್ ನಂ. 25: ಹಿಂದುಳಿದ ವರ್ಗ (ಎ)ಗೆ ನಿಗದಿಯಾಗಿದೆ.

ರಕ್ತದಾನ ಜೀವ ಉಳಿಸುವ ಮಹಾಕಾರ್ಯ: ಪುಷ್ಪಗಿರಿಶ್ರೀ

• ಪ್ರಜೋದಯ ವರದಿ

ಹಳೇಬೀಡು: ರಕ್ತದಾನದಿಂದ ಹೃದಯ ಸಂಬಂಧಿ ಕಾಯಿಲೆ, ಪಾಶ್ವವಾಯು ಅಪಾಯಗಳ ನ್ನಷ್ಟೇ ಅಲ್ಲ ದೇಹದ ಕಬ್ಬಿಣ ಅಂಶವನ್ನು ಸಹ ನಿಯಂತ್ರಿಸುತ್ತದೆ. ಅಪಘಾತ, ಗರ್ಭಧಾರಣೆ ಅಥವಾ ತುರ್ತು ಪರಿಸ್ಥಿತಿಯಲ್ಲಿ ಜೀವ ಉಳಿಸುವ ಮಹಾಕಾರ್ಯ ಎಂದು ಪುಷ್ಪಗಿರಿ ಮಹಾ ಸಂಸ್ಥಾನ ಮಠದ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಅವರು ಹೇಳಿದರು.

ಹಳೇಬೀಡು ಸಮೀಪ ಅಡಗೂರು ಗ್ರಾಮದಲ್ಲಿ ಚೇತನ್ ಗುರೂಜಿ ಅವರ ನೇತೃತ್ವದಲ್ಲಿ ರೋಟರಿ ಕ್ಲಬ್, ಹಾಸನ ಸನ್‌ರೈಸ್, ಆಲೀವ್ ಗಾರ್ಡನ್, ವೀರಭದ್ರೇಶ್ವರ ಸ್ವಾಮಿ ಟ್ರಸ್ಟ್, ಪುಷ್ಪಗಿರಿ ಗ್ರಾಮೀಣಾಭಿವೃದ್ಧಿ ಸಂಸ್ಥೆ, ರೈತ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ದಾನಗಳಲ್ಲಿ ಶ್ರೇಷ್ಠ ದಾನ ರಕ್ತದಾನ. ರಕ್ತದಾನದಿಂದ ಒಬ್ಬರ ಜೀವ ಉಳಿಯುತ್ತದೆ, ದಾನಿಯ ಆರೋಗ್ಯವೂ ಸುಸ್ಥಿತಿಯಲ್ಲಿರುತ್ತದೆ ಎಂದು ತಿಳಿಸಿದರು.

ಪಾಂಡೋಮಟ್ಟಿ ಶ್ರೀ ಗುರುಬಸವ ಸ್ವಾಮೀಜಿ ಅವರು ಮಾತನಾಡಿ, ಈ ಹಿಂದೆ ಜನರು ರಕ್ತ ನೀಡಲು ಹಿಂದೇಟು ಹಾಕುತ್ತಿದ್ದರು. ಇಂದು ಹುಟ್ಟುಹಬ್ಬ, ಜಯಂತಿ, ಸಂಭ್ರಮಗಳಲ್ಲಿ ಸಹ ಜನರು ರಕ್ತ ನೀಡುತ್ತಿರುವುದು ಸಮಾಜದ ಅರಿವು ಹೆಚ್ಚಿದ ಸಂಕೇತ. ಚೇತನ್ ಗುರೂಜಿ ಅವರು ಗ್ರಾಮೀಣ ಜನತೆಗೆ ಯೋಗದ ಮೂಲಕ ಆರೋಗ್ಯ ನೀಡುವುದರ ಜೊತೆಗೆ ರಕ್ತದಾನದ ಮಹತ್ವವನ್ನೂ ಬೋಧಿಸುತ್ತಿದ್ದಾರೆಂದು ಪ್ರಶಂಸಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಅವರು ಮಾತನಾಡಿ, ರಕ್ತದಾನ ಮಾಡುವ ಮೊದಲು ದಾನಿಯ ಆರೋಗ್ಯ ಪರೀಕ್ಷೆ ಮಾಡಿಕೊಳ್ಳುವುದು ಅತ್ಯವಶ್ಯ. ರಕ್ತದಾನ ದೇಹದ ಕಬ್ಬಿಣದ ಅಂಶವನ್ನು ಕಡಿಮೆ ಮಾಡಿ ಹೃದಯದ ಆರೋಗ್ಯ ಕಾಪಾಡುತ್ತದೆ ಎಂದರು.

ಶಿಬಿರದದಲ್ಲಿ ಚೇತನ್ ಗುರೂಜಿ ಅವರು 100ನೇ ಬಾರಿಗೆ ರಕ್ತದಾನ ಮಾಡಿದರು. ಬಳಿಕ ಮಾತನಾಡಿದ ಅವರು, ಸತತ ಶತಕದ ರಕ್ತದಾನ ಮಾಡಿದರೂ ನಾನು ಸಂಪೂರ್ಣ ಆರೋಗ್ಯವಾಗಿದ್ದೇನೆ. ಧ್ಯಾನ, ಯೋಗ ಮತ್ತು ಗುರುಗಳ ಆಶೀರ್ವಾದ ನನಗೆ ಶಕ್ತಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅವರ ಪತ್ನಿಯೂ ಮೊದಲ ಬಾರಿಗೆ ರಕ್ತ ನೀಡಿದರು. ಗ್ರಾಮಸ್ಥರಿಂದ ಒಟ್ಟು 1,000 ಪ್ಯಾಕ್ ರಕ್ತ ಸಂಗ್ರಹಿಸಿ ಮಹಾ ಸಾಧನೆ ಮಾಡಲಾಯಿತು. ದೇಹದಾನ, ನೇತ್ರದಾನದ ನೋಂದಣಿಗೆ ಸಹ ಇದೇ ವೇದಿಕೆಯಲ್ಲಿ ಚಾಲನೆ ನೀಡಲಾಯಿತು.

ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಬೇಲೂರು ತಾಲ್ಲೂಕು ಪತ್ರಕರ್ತರ ಸಂಘ ಅಧ್ಯಕ್ಷ ರಘುನಾಥ್, ಹೆಬ್ಬಾಳು ಭುವನೇಶ್, ಅತೀಕ್, ನಟರಾಜು, ಡಾ.ಉಮೇಶ್ ಇದ್ದರು.

ನಗರದಲ್ಲಿ ಶ್ರೇಯಸ್ ಪಟೇಲ್ ಹುಟ್ಟುಹಬ್ಬ ಆಚರಣೆ

• ಪ್ರಜೋದಯ ವರದಿ

ಹಾಸನ: ಸಂಸದ ಶ್ರೇಯಸ್ ಪಟೇಲ್ ಅವರ ಹುಟ್ಟುಹಬ್ಬವನ್ನು ಕಾಂಗ್ರೆಸ್ ಕಾರ್ಯಕರ್ತರು ನಗರದಲ್ಲಿ ಶನಿವಾರ ಆಚರಿಸಿದರು.

ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು ಹಾಗು ಕಾರ್ಯಕರ್ತರು ಬೆಳಿಗ್ಗೆ ನಗರದ ನೀರುವಾಗಿಲು ಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಈಡುಗಾಯಿ ಒಡೆದರು. ನಂತರ ದರ್ಗಾದಲ್ಲಿ ವಿಶೇಷ ಪೂಜೆ ಸಲ್ಲಿಸಿ ಬಳಿಕ ಹಿಮ್ಸ್ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮಾಡಿದರು. ಅಂಧ ಮಕ್ಕಳ ಶಾಲೆ, ವೃದ್ಧಾಶ್ರಮಗಳಲ್ಲಿ ಅನ್ನದಾನ, ಬೀದಿ ಬದಿ ವಾಸಿಗಳಿಗೆ ಹಾಸಿಗೆ ಹೊದಿಕೆ ವಿತರಿಸುವ ಮೂಲಕ ಇಡೀ ದಿನವನ್ನು ಸೇವಾ ದಿನವಾಗಿ ಆಚರಿಸಿದರು.

ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು ಅವರು ಮಾತನಾಡಿ, ಶ್ರೇಯಸ್ ಪಟೇಲ್ ಅವರ 34ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಯುವ ಕಾಂಗ್ರೆಸ್ ವತಿಯಿಂದ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಶ್ರೇಯಸ್ ಪಟೇಲ್ ಅವರಿಗೆ ದೇವರು ಆಯಸ್ಸು ಆರೋಗ್ಯದ ಜೊತೆಗೆ ಇನ್ನಷ್ಟು ದೊಡ್ಡ ಹುದ್ದೆ ಗಳಿಸುವ ಶಕ್ತಿ ಕೊಟ್ಟು ಇನ್ನಷ್ಟು ಜನ ಸೇವೆಗೆ ಅವಕಾಶ ಮಾಡಿಕೊಡಲಿ ಎಂದು ಶುಭ ಹಾರೈಸಿದರು.

ಚಿಕ್ಕ ವಯಸ್ಸಿನಲ್ಲೇ ಸಂಸದರಾಗಿ ಅಪಾರ ಜನಸೇವೆ ಮೂಲಕ ಜನಮನ್ನಣೆ ಗಳಿಸಿರುವ ಶ್ರೇಯಸ್ ಅವರು ಸಂಸದರಾದ ಆರಂಭದಿಂದಲೂ ಪ್ರತಿಯೊಬ್ಬರ ಕಷ್ಟ ಆಲಿಸುವ ಮೂಲಕ ಅದಕ್ಕೊಂದು ಪರಿಹಾರ ಕಲ್ಪಿಸಲು ಕೆಲಸ ಮಾಡುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಮುಖಂಡರಾದ ಇಸ್ಮಾಯಿಲ್ ವಿವೇಕ್, ಮಹದೇವ್ ಯಶವಂತ್, ಇಸ್ಮಾಯಿಲ್, ನಿತಿನ್, ಅವಿನಾಶ್, ಪ್ರೀತಂ, ಅಭಿಷೇಕ್, ಹಿಂದೂ ಕುಮಾರ್ ಇತರರಿದ್ದರು.

ಜಂಬೂರು : ಶನೇಶ್ವರ ಸ್ವಾಮಿ ಬ್ರಹ್ಮರಥೋತ್ಸವ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಪ್ರತಿ ವರ್ಷದಂತೆ ಈ ವರ್ಷವೂ ಕಾರ್ತಿಕ ಮಾಸದ ಪ್ರಯುಕ್ತ ತಾಲ್ಲೂಕಿನ ಜಂಬೂರು ಗ್ರಾಮದ ಶ್ರೀ ಶನೇಶ್ವರ ಸ್ವಾಮಿ 38ನೇ ವರ್ಷದ ಅದ್ದೂರಿ ಜಾತ್ರಾ ಮಹೋತ್ಸವ ಹಾಗೂ ಬ್ರಹ್ಮರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಶನಿವಾರ ನೆರವೇರಿತು.

ಶ್ರೀ ಶನೇಶ್ವರ ಸ್ವಾಮಿಯವರ 38ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ ಬ್ರಹ್ಮರಥೋತ್ಸವ ಅಂಗವಾಗಿ ಬೆಳಿಗ್ಗೆಯಿಂದಲೇ ದೇವಾಲಯದಲ್ಲಿ ಶ್ರೀ ಶನೇಶ್ವರ ಸ್ವಾಮಿ ದೇವರಿಗೆ ಅಭಿಷೇಕ ವಿಶೇಷ ಹೂವಿನ ಅಲಂಕಾರ ಹೋಮ ಅವನ ಸೇರಿ ವಿವಿಧ ಪೂಜೆಗಳು ನೆರವೇರಿದವು.

ಗ್ರಾಮದ ರಾಜಬೀದಿಗಳಲ್ಲಿ ಶ್ರೀ ಶನೇಶ್ವರಸ್ವಾಮಿ ಶ್ರೀ ಕೋಟೆ ಮಾರಮ್ಮ ದೇವಿ, ಅವೇರಹಳ್ಳಿ ಚಿಕ್ಕಮ್ಮ ದೇವಿ, ಹಾರೋಸೋಮನಹಳ್ಳಿ ಸಂಪಿಗೆ ಮಾರಮ್ಮದೇವಿ, ಹುಲಿಕೆರೆ ಆಲದ ಮರದಮ್ಮ ದೇವಿ, ಕಾರೆಕೆರೆಯ ಶ್ರೀ ದೇವಮ್ಮ ದೇವಿ, ತಾವರೆಕೆರೆಯ ಶ್ರೀ ದೊಡ್ಡಮ್ಮ ದೇವಿ, ಶ್ರೀ ಮಾತಂಗಿ ದೇವಿ, ವಿರೂಪಾಕ್ಷಪುರದ ರೇಣುಕಾ ಯಲ್ಲಮ್ಮ ದೇವಿ, ಒಂಟಿ ಮಾವಿನ ಹಳ್ಳಿ ಶ್ರೀ ಆಂಜನೇಯ ಸ್ವಾಮಿ, ಗೌಡಗೆರೆ ಹುಲಿ ಕೇರಮ್ಮ ದೇವಿ ದೇವರುಗಳ ಮಹಿಳೆಯರ ತಂಬಿಟ್ಟಿನ ಆರತಿಯೊಂದಿಗೆ ಉತ್ಸವ ನೆರವೇರಿತು.

ಬೆಂಗಳೂರು ಸೇರಿ ಜಿಲ್ಲೆ ಹಾಗೂ ತಾಲ್ಲೂಕು ಕೇಂದ್ರಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡರು. ರಥೋತ್ಸವ ಮುನ್ನ ಶ್ರೀ ಶನೇಶ್ವರ ಸ್ವಾಮಿಯವರ ರಥದ ಸುತ್ತ ಪ್ರದಕ್ಷಿಣೆ ನಡೆಸಿ ನಂತರ ರಥದಲ್ಲಿ ದೇವರನ್ನು ಪ್ರತಿಷ್ಠಾಪಿಸಲಾಯಿತು.

ಸಂಪ್ರದಾಯದಂತೆ ಪೂಜಾ ವಿಧಿ ವಿಧಾನಗಳು ನೆರವೇರಿದ ನಂತರ ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ಎ.ಗೋಪಾಲಸ್ವಾಮಿ ಹಾಗೂ ದೇವಾ ಲಯದ ಧರ್ಮದರ್ಶಿ ಮಹಾ ದೇವಸ್ವಾಮಿ ಪೂಜೆ ಸಲ್ಲಿಸಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಭಕ್ತರು ರಥಕ್ಕೆ ಹಣ್ಣು ದವನ ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು.

ಬ್ರಹ್ಮರಥೋತ್ಸವದ ಅಂಗವಾಗಿ ಗ್ರಾಮದ ಶ್ರೀಮತಿ ಜಯಮ್ಮ ದಿ|| ಶ್ರೀ ಅಂಗಡಿ ರಂಗೇಗೌಡ ಮತ್ತು ಮಕ್ಕಳು ಗುಡಿಗೌಡ್ರು ಎಂ.ಎ.ಕುಮಾರ ಸ್ವಾಮಿ ಮತ್ತು ಸಹೋದರರಿಂದ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ರಥೋತ್ಸವದ ಅಂಗವಾಗಿ ಶ್ರೀ ವೀರಭದ್ರ ಕುಣಿತ, ಡೊಳ್ಳು ಕುಣಿತ, ನಂದಿಧ್ವಜ ಮತ್ತು ವೀರಗಾಸೆ ಕುಣಿತ ಸೇರಿ ವಿವಿಧ ಕಲಾತಂಡಗಳಿಂದ ಅನೇಕ ಕಾರ್ಯಕ್ರಮ ನಡೆದವು. ರಾತ್ರಿ ಶ್ರೀ ಶನೇಶ್ವರ ಸ್ವಾಮಿ ಉಯ್ಯಾಲೆ ಉತ್ಸವ ಹಾಗೂ ರಾಜ ಸತ್ಯವ್ರತ ಅಥವಾ ಶನಿಪ್ರಭಾವ ನಾಟಕ ನಡೆಯಲಿದೆ.

ಜಾತ್ರಾ ಮಹೋತ್ಸವದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲ ಸ್ವಾಮಿ, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯೆ ಕುಸುಮಬಾಲಕೃಷ್ಣ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ.ಎ.ರಂಗಸ್ವಾಮಿ ಪಾಲ್ಗೊಂಡು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ದೇವಾಲಯದ ಧರ್ಮದರ್ಶಿ ಮಹಾದೇವಸ್ವಾಮಿ, ಅರ್ಚಕ ಚೆಲುವ ರಾಜು, ಜಂಬೂರು ಸೇರಿ ಅನೇಕ ಗ್ರಾಮಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲೆಯಲ್ಲಿ 7,191 ಆರ್‌ಟಿಐ ಅರ್ಜಿ ವಿಲೇವಾರಿ, 144 ಬಾಕಿ

» **ಮೊದಲನೇ ಪುಟದಿಂದ**

ರಾಜ್ಯದಲ್ಲಿ 35 ಸಾವಿರ ಅರ್ಜಿ ವಿಲೇವಾರಿ ಬಾಕಿ

ನಾವು ಹೊಸದಾಗಿ ಆಯೋಗಕ್ಕೆ ಆಯುಕ್ತರಾಗಿ ನೇಮಕವಾಗಿ ಬಂದ ಸಮಯದಲ್ಲಿ ರಾಜ್ಯದಲ್ಲಿ ಒಟ್ಟು 55, 498 ದ್ವಿತೀಯ ಮೇಲ್ಮನವಿ ಅರ್ಜಿಗಳು ನಮ್ಮ ಮುಂದೆ ಬಾಕಿ ಇದ್ದವು. ಈಗ ಆ ಅರ್ಜಿಗಳನ್ನು 35,344ಕ್ಕೆ ಇಳಿಸಲಾಗಿದೆ. ಬೆಳಗಾವಿ ಮತ್ತು ಕಲಬುರಗಿ ಪೀಠದಲ್ಲೇ ಹೆಚ್ಚು ಅರ್ಜಿಗಳು ಬಾಕಿ ಇರುವುದರಿಂದ ಅಲ್ಲಿಗೆ ಹೋಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಚರ್ಚೆಗಳು ನಡೆಯುತ್ತಿವೆ. ಜಿಲ್ಲೆಗೂ ಭೇಟಿ ನೀಡಿ ಅರ್ಜಿ ವಿಲೇ ಮಾಡಲು ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಸರ್ಕಾರಕ್ಕೆ ಶಿಫಾರಸ್ಸು

ಕೆಪಿಎಸ್‌ಸಿ ನೇಮಕಾತಿ ಪರೀಕ್ಷೆಯಲ್ಲಿ ಆರ್‌ಟಿಇ ಬಗ್ಗೆ ಸೇರಿಸಬೇಕು. ಸರ್ಕಾರಿ ಹುದ್ದೆಗೆ ನೇಮಕವಾಗುವ ಸಂದರ್ಭದಲ್ಲಿ ಮಾಹಿತಿ ಹಕ್ಕು ಕಾಯ್ದೆ ಬಗ್ಗೆ ತಿಳಿದು ಕೊಳ್ಳಬೇಕೆಂಬ ಉದ್ದೇಶದಿಂದ ಈ ವಿಷಯವನ್ನು ಸರ್ಕಾರಕ್ಕೆ ನಾವು ಶಿಫಾರಸ್ಸು ಮಾಡಿದ್ದೇವೆ. ಎಲ್ಲಾ ಜಿಲ್ಲೆಯ ಕೆಡಿಪಿ ಸಭೆಯಲ್ಲಿ ಆರ್‌ಟಿಐ ಅರ್ಜಿ ವಿಲೇವಾರಿ ಬಗ್ಗೆ ಚರ್ಚೆ ಮಾಡಬೇಕೆಂದು ಸಲಹೆ ನೀಡಿದ್ದೇವೆ ಎಂದು ತಿಳಿಸಿದರು.

ಅಪಾರ ಜಿಲ್ಲಾಧಿಕಾರಿ ಮಂಜುನಾಥ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು ಹಾಜರಿದ್ದರು.

ಗೊರೂರು ಸೇರಿ 5 ಆರೋಗ್ಯ ಕೇಂದ್ರಕ್ಕೆ ರಾಷ್ಟ್ರಮಟ್ಟದ ಗರಿ

» **ಮೊದಲನೇ ಪುಟದಿಂದ**

ಗೊರೂರು ಆರೋಗ್ಯ ಕೇಂದ್ರ ವೈದ್ಯಾಧಿಕಾರಿ ಡಾ.ತೇಜಸ್ವಿ ಮಾರ್ಗದರ್ಶನದಲ್ಲಿ ಆರೋಗ್ಯ ಸಿಬ್ಬಂದಿ ನಿಷ್ಠೆಯಿಂದ ಆಸ್ಪತ್ರೆಯ ಕಾರ್ಯವೈಖರಿ ಚಿತ್ರಣವೇ ಬದಲಾಗಿದೆ.

ಆರು ತಿಂಗಳ ಹಿಂದೆ ಕಾರ್ಲೆ ಪ್ರಾಥಮಿಕ ಆರೋಗ್ಯ ಕೇಂದ್ರವೂ ಪ್ರಮಾಣಪತ್ರ ಪಡೆದಿತ್ತು. ಜಿಲ್ಲೆಯಲ್ಲಿ ಎರಡನೇ ಬಾರಿ ರಾಷ್ಟ್ರಮಟ್ಟದ ಗುಣಮಟ್ಟ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರುವುದು ತೇಜಸ್ವಿ ಅವರ ಮಾರ್ಗದರ್ಶನದ ವಿಶೇಷ ಸಾಧನೆ ಎಂದು ಆರೋಗ್ಯ ಇಲ